# ಇಕ್ಷುಗಂಗೋತ್ರಿ

## ಇಕ್ಷುಗಂಗೋತ್ರಿ

ಇದೊ ಗಂಗೊತ್ರಿ,
ಹೇ ಮಾನಸಯಾತ್ರಿ!
ಇದು ನಕ್ಷತ್ರೇಕ್ಷು
ಸೂಸಿದ ರಸಧಾರೆಗೆ ಸಂಭವಿಸಿಹ ಶೃಂಗಸರೋವರ ಚಕ್ಷು!
ಮಾನಸ ಅತಿಮಾನಸಕೇರುವೆಡೆ;
ಅತಿಮಾನಸ ಮಾನಸಕಿಳಿಯುವೆಡೆ;
ಅಧಿಮಾನಸ ಮೈದೋರುವೆಡೆ
ಏ ಈ ಗಂಗೋತ್ರಿ;
ಭೂಮಂಡಲ ಶತ ಶತ ಆಕಾಂಕ್ಷೆ,
ನರ ನರ ಹೃದಯದ ಕೋಟಿ ಅಭೀಪ್ಸೆ
ಹರಚರಣಕೆ ಏರುವ ಊರ್ಧ್ವಾಶೆ
ಈ ತೀರ್ಥ ಕ್ಷೇತ್ರಕೆ ಚಿರಯಾತ್ರಿ!
ಎಲ್ಲತತ್ತ್ವಗಳ ಮೂಲನಿಧಿ,
ಎಲ್ಲಚಿಂತನದ ವಾರಿನಿಧಿ,
ಎಲ್ಲ ನಂಬುಗೆಯ ಅಂಭೋಧಿ
ಈ ಮಧು ಗಂಗೋತ್ರಿ!

ಯಮುನಾ ಗಂಗಾ,
ಕೃಷ್ಣಾ, ತುಂಗಾ,
ಮಿಸಿಸಿಪಿ, ಅಮಜಾನ್,
ಥೇಂಮ್ಸ್ , ಡಾನ್,
ಎಲ್ಲನದಿಗಳಿಗೂ ಇಲ್ಲಿಯೆ ಉಗಮ:
ಎಲ್ಲ ಸಮುದ್ರಗಳೆಲ್ಲ ಶಿಖರಗಳಿಗಿಲ್ಲಿಯೆ ಸಂಗಮ:
ಈ ಋತಚಿದ್ ಗಂಗೋತ್ರಿ!
ಇಲ್ಲಿಂದಲೆ ಸಂಭವಿಸುತ ಹರಿಯುತ್ತಿದೆ ಗಾಯತ್ರಿ,
ಮರ್ತ್ಯಚೇತಸದ ಹೃದಯ ಹೃದಯದೊಳೂ
ತಾನಾಗುವವರೆಗೂ ಚಿರಯಾತ್ರಿ!
ಇದೆ ಮಧುಗಂಗೋತ್ರಿ,

ಹೇ ಮಾನಸಯಾತ್ರಿ!
ಧ್ಯಾನಿಸಿ ನಿಲ್ಲಿಲ್ಲಿ;
ಸಾಧಿಸಿ ನಿಲ್ಲಿಲ್ಲಿ:
ಆ ಲೋಕವನೀ ಲೋಕಕೆ
ಸೆಳೆವ ಭಗೀರಥನಾಗಿಲ್ಲಿ!
ಈ ಲೋಕವನಾ ಲೋಕಕೆ
ಸೇದುವ ಸೇತುವೆಯಾಗಿಲ್ಲಿ!
ಅದನಿದಕೂ ಇದನದಕೂ
ಬಂಧಿಸಿ ನೆಯ್ದೊಂದಾಗಿಪ
ಋಷಿಮಾನವ ರಸಚೆತನ
ವಿದ್ಯುದ್ ವಾಹಕವಾಗಿಲ್ಲಿ!

೧೨-೨-೫೭

# ವಿಶ್ವವಿದ್ಯಾನಿಲಯೆ ಭಗವತಿ ಶ್ರೀ ಸರಸ್ವತಿಗೆ*

೧

ಓಂ
ಅಸತ್ತಿನಿಂದೆ ಸತ್ತಿನೆಡೆಗೆ
ತಮಸ್ಸಿನಿಂದೆ ಜ್ಯೋತಿಯೆಡೆಗೆ
ಮೃತ್ಯುವಿಂದೆ ಅಮೃತದೆಡೆಗೆ
ಕರೆದೊಯ್ಯುವ ತಾರಿಣಿ,
ವಿದ್ಯೆಯಾಗಿ ಮುಕ್ತಿಯಿವ
ಅವಿದ್ಯಾಪರಿಹಾರಿಣಿ,
ಬಂಧನಭವತಾರಿಣಿ,
ನಮೋ
ಸಕಲ ರಸಾನಂದ ಕಲಾ
ಕ್ಷೇತ್ರರೂಪಧಾರಿಣಿ,
ನಮೋ ನಮೋ ನಮೋ
ಹೇ ತಮೋಹಾರಿಣಿ!

೨

ಏಳು, ಬ್ರಹ್ಮಹೃದಯ ಸದ್ಮೆ,
ರಸಋಷಿ ಕವಿ ಪ್ರಾಣಪದ್ಮೆ:
ಹೇಳು, ಎಲ್ಲ ಬಲ್ಲ ಜಾಣೆ,
ನಿಖಿಲ ಜಗಜ್ಜೀವ ವೀಣೆ
ನೀನಿಲ್ಲದೆ ನಾನು ಕಾಣೆ
ಸೃಷ್ಟಿಯ ಪರಮಾರ್ಥವ.
ಓ ಪ್ರಾಚ್ಯೆ, ಪಾಶ್ಚಾತ್ಯೆ,
ಔತ್ತರೆಯೆ, ದಾಕ್ಷಿಣಾತ್ಯೆ, ಸರ್ವಮಿಥ್ಯೆ, ಪೂರ್ಣಸತ್ಯೆ,
ಕಲಿಸು ಚಿದಾನಂದಚಿತ್ತೆ,
ಬಾಳ್ವೆಯ ಪುರುಷಾರ್ಥವ.

೩

ಹೇ ಆನಕ್ಷರೇ,
ಹುಟ್ಟುವಂದು ತಾಯಿಯಾದೆ;
ಹೊರೆಯುವಂದು ತೊಟ್ಟಿಲಾದೆ;
ಬೆಳೆಯುವಂದು ಗದ್ದೆ, ತೋಟ,
ಸಹ್ಯಾದ್ರಿಯ ಚೆಲುವುನೋಟ,
ಬಾನು, ಮುಗಿಲು, ಬೆಟ್ಟ, ಕಾಡು,
ಹುಲಿಯ ಬೀಡು ,ಹಕ್ಕಿಹಾಡು,
ಹೊಳೆಯ ಮಳೆಯ ಮಲೆಯ ನಾಡು-
ನೂರು ರೂಪ ನೂರು ಭಾವಗಳಲಿ ಕಾವ್ಯಬೋಧೆ
ಹೃದಯದಲ್ಲಿ ಸ್ಫುರಿಸುವಂತೆ ಪ್ರಕೃತಿಮಾತೆಯಾದೆ,
ಭವ್ಯಸೃಷ್ಟಿರೂಪಿಣಿ,
ಹೇ ಗುರುಸ್ವರೂಪಿಣಿ!

೪

ರಸಕ್ಷೀರಶರಧಿಯಲ್ಲಿ ನಿನ್ನ ದಿವ್ಯಹಸ್ತ
ಕಡೆಯುತಿರಲು ಮೂಡಿತೊಂದು ಮೇರುಸದೃಶ ಹುತ್ತ:
ಸುಪ್ತಫಣಿಯ ಗುಪ್ತರೋಷವಾಗುವಂತೆ ತಪ್ತ

ಸುರುಳಿಬಿಚ್ಚುತಿತ್ತು ಅಲ್ಲಿ ಆದಿಕವಿಯ ಚಿತ್ತ!
ಹೇ ಅರೂಪಮೋಹಿನಿ,
ನಿನ್ನ ಸುಳಿಗೆ ಸೆಳೆದ ಮನಸು
ಹಸುಳೆಯುಸಿರ ಹೊನ್ನ ಕನಸು
ಹೊಸತು ರಸದ ಹಸಿವೆಯಿಂದ ಸುಳಿದುದತ್ತ ಇತ್ತ:
ಜೀವಮಧುಪ ಕುಟಜಕೋಟಿಗಳಲಿ ವಿಹರಿಸುತ್ತ
ಪುಷ್ಪಲಕ್ಷವಕ್ಷಗಳನು ಚುಂಬಿಸುತ್ತ
ಹೀರಿ ಹಾರಿ ಝೇಂಕರಿಸಿತು ಮಕರಂದ ನಿಮಿತ.
ಸೇರ್ವೆಯಾಯ್ತು ಮಧುಪಟಲದಿ
ಜೇನ್ ಗಣ್ಣಿನ ಶತಜಟಿಲದಿ
ಕರ್ಣಾಟಕ ಸರಸ್ವತಿಯ ಜಿಹ್ವೆಯಮೃತ ವಿತ್ತ!

೫

ಹೇ ಮೃತ್ಯುಮಾಧುರೀ,
ಸಾವಿನೊಂದು ನೋವಿನೊಂದು ಹಾವಿನಂತೆ ಬಂದೆ;
ಹುತ್ತಹೊಕ್ಕು ಕವಿಯನೆಳೆದು ದೂರ ಕರೆದು ತಂದೆ:
ಸಹ್ಯಶಿಶುಗೆ ಚಾಮುಂಡಿಯೆ ಸ್ತನ್ಯವಾಗೆ ನಿಂದೆ!
ಹೊಸತೆ ಹುಟ್ಟಿದೆಳೆಯ ಕರು
ತಾಯ್ಗೆಚ್ಚಲನರಸುವೋಲ್
ಕವಿಯಾತ್ಮದ ತೃಷೆಯ ತರು
ತಡವಿ ಹುಡುಕಿ ಚಾಚಿರೆ ತೋಳ್,
ಕೃಪಾಮಯೀ ಜಗಜ್ಜನನಿ
ಜ್ಞಾನಾಮೃತ ದಿವ್ಯಸ್ತನಿ,
ನಿನ್ನ ವಕ್ಷದಮೃತಕಲಶ ಹಸಿದ ತುಟಿಗೆ ತಾಗಿ
ರಸವನೀಂಟಿದತಲ ಭೋಗಿ
ಅತುಲ ವೈನತೇಯನಾಗಿ
ಅಮರಗಂಗೆ ಭಗೀರಥಗೆ ಒಲಿದಳಪಗೆಯಾಗಿ!
ಗಂಗೆಯೊಡನೆ ಥೇಂಸಿಗಾಯ್ತು ಗಹನ ಗಗನಸಂಗಮ;
ನೆರೆಯುಕ್ಕಿದ ಕಾವೇರಿಗೆ ಸೊಗಸಿದುವು ವಿಹಂಗಮ:
ವಂದಿಸುತ್ತ ಸಂಧಿದ್ದುವು ಧನ್ಯ ಪೂರ್ವಪಶ್ಚಿಮ!

೬

ಏನದ್ಭುತ, ಏನ್ ಸಾಹಸ, ಕೃತಿಲೋಕಾರ್ಷಣ:
ಶತಚಿಂತನ ರಸಭಾವನ ರೋಮಾಂಚನ ಘರ್ಷಣ!
ಕ್ಷೀರಾಬ್ಧಿಯ ದೇವಾಸುರ ಫಣಿಮಂಥನ ಮಂದರ,
ಐರಾವತ ಉಚ್ಚೈಃಶ್ರವ ಅಮೃತ ಲಕ್ಷ್ಮಿಬಂಧುರ,
ಹಾಲಾಹಲ ವಿಷಘೋರವನೀಂಟುವ ಶಿವ ಸುಂದರ:
ಏನದ್ಭುತ, ಏನ್ ಸಾಹಸ, ಕೃತಿಲೋಕಾಕರ್ಷಣ್!
ಕವಿಧಮನಿಯ ರಕುತದಲ್ಲಿ
ತೇಲಾಡಿತು ಹಿಮಾಲಯ;
ಉಚ್ಛ್ವಾಸದಿ ಸ್ಪಂದಿಸಿತಾ
ಸಹ್ಯಾದ್ರಿಯ ಅರಣ್ಯಚಯ!
ಶತ ಶತ ಶತ ವಿಕಸಿತ ದಲವಾದುದು ಋಷಿಹೃನ್ನಿಯ:
ಅವತರಿಸಿತು ತವ ಚರಣದ ಮಧುಛಂದೋ ನಾಟ್ಯಲಯ;
ವಿಶ್ವಪ್ರಜ್ಞೆಗೆ ವೇದಿಕೆಯಾದುದು ಶ್ರೀ ವಿದ್ಯಾನಿಲಯ!

೬

ಚಿದ್ರೂಪಿಣಿ ಭರತಾರಿಣಿ ಉತ್ತರರೋತ್ತರೆ
ಕವಿಯನೆತ್ತಿ ರಕ್ಷಿಸಲ್ಕೆ
ಬಂದಳಿತ್ತ ದಕ್ಷಿಣಕ್ಕೆ
ಶ್ರೀ ವಿವೇಕ ಪರಮಹಂಸ ದಕ್ಷಿಣೇಶ್ವರೆ;
ಕಣ್ದೆರೆಯಿತು ಬೋಧನಾ
ಗರಿಗೆದರಿತು ಸಾಧನಾ
ಅಲೋಕಲೋಕ ಯಾತ್ರಿಯಾಯ್ತು ದಿವ್ಯದರ್ಶನ.
ಲಲಿತಾದ್ರಿಯ ಲಲಿತಸಂಗ
ಚಾಮುಂಡಿಯ ರುದ್ರರಂಗ
ಕಾರಂಜಿಯ ಜಲತರಂಗ
ತಾವಾದುವು ವಿದ್ಯಾಂಬಿಕೆಯಂತರಂಗ!
ಬಾನಾದುದು ಭಗವಂತನ ಮಾನಸ ಚಿದ್ರೂಪ:
ಬುವಿಯಾದುದು ಭಗವತಿಯಾ ಮೈತ್ರಿಯ ಮೃದ್ರೂಪ:
ಜಗವೆಲ್ಲ ತಾನಾದುದು ರಸಲೀಲಾರೂಪ!
ರಸದೃಷ್ಟಿಗೆ ಬ್ರಹ್ಮಾಂಡವೆ ಋತಚಿನ್ಮಯ ಕಾವ್ಯಮಯ;
ಅನುಭಾವದ ವಿಜ್ಞಾನಕೆ ಅನ್ನವು ಆನಂದಮಯ!

೮

ಆಕಾಶದ ಆನಂತ್ಯದಿ, ಹೇ ಅನಂತೇ,
ಗರಿಗೆದರಿದೆ ಖಗಚೇತನ ಚಿದಾನಂದ ಚಿಂತೆ.
ಹಾರುತ್ತಿದೆ! ಏರುತ್ತಿದೆ!
ಅಗ್ನಿಗೆ ಬಳಿಸಾರುತ್ತಿದೆ!
ಸುಗಿಯದವೋಲ್ ಶೂನ್ಯತೆಗೀ ಮಮಕಾರದ ಚಿಕ್ಕೆ,
ಋತಚಿನ್ನಯಿ, ಕ್ರತುದೀಕ್ಷಿತೆ, ನಿನ್ನಯ ಕೃಪೆಯಕ್ಕೆ
ಸಾಧನದೀ ಸಾಹಸಕ್ಕೆ
ಸೋಲದವೋಲ್ ರೆಕ್ಕೆ!
ಪೂರ್ಣತೆಯಿಂದ್ವೈತಂದೀ ಪೂರ್ಣಸೃಷ್ಟಿ
ಪೂರ್ಣತೆಯಿಂ ಪಡೆಯುವಂತೆ ಪೂರ್ಣಪುಷ್ಟಿ
ಅರವಿಂದದವೋಲ್ ಅರಳಲೆಮಗೆ ಯೋಗಪೂರ್ಣದೃಷ್ಟಿ!
ಓಂ ಶಾಂತಿಃ ಶಾಂತಿಃ ಶಾಂತಿ

೧೯೫೧

# ಕರ್ಣಾಟಕ ರಾಜ್ಯೋದಯ ಶ್ರೀಗೀತೆ

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ।
ಪೃಥವೀಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ।
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ॥

ಬಾರಮ್ಮ ದೇವಿ,
ಓ ತಾಯಿ ಬಾರತಿಯೆ, ನಿನ್ನ ಮಗಳನ್ನು ಹರಸು.
ವರುಷ ಒಂಬತ್ತರಾಚೆಯಲಿ ಬಂಧನಮುಕ್ತಳಾದಂದು
ನೀ ಕಂಡ ಕನಸು,
ಎರಡು ಕೋಟಿಯ ಹೃದಯದಲಿ ಶತಮಾನದಿಂ ಕುದಿದ ಒಮ್ಮನಸು,
ದುರ್ಮುಖಿಯೆ ಸುಮುಖಿ ತಾನಾದ ದೀವಳಿಯ ಸುದಿನದಿಂದು
ತಾನಾಗಿಹುದ ನನಸು!

ಪುಲಕಿಸುತ್ತಿದೆ ಪಡುಗಡಲ್;
ರೋಮಾಂಚನದಿ ನಿಮಿರುತಿದೆ ಸಹ್ಯಾದ್ರಿ;
ಗಂಧ ಚವರಿಯ ಬೀಸುತಿದೆ ಮಲಯ ವನಸೀಮೆ;
ಪಕ್ಷಿ ಕೋಟಿಯ ಕಂಠ ಘೇಘೋಷಮುಕ್ಕುತಿದೆ
ದಿಕ್ಕು ಕಿವಿಗೆಡುವಂತೆ, ದೇವರ್ಕಳೊಲಿವಂತೆ,
ಕಾರ್ತಿಕದ ಬಾನ್ನೀಲಿ ತಾಂ ಶಾಂತಿಯಾಲಿಂಗನದಿ
ಕನ್ನಡದ ನೆಲಮಗಳನಪ್ಪಿ ಚುಂಬಿಸುವಂತೆ!
ನಮಿಸುತಿದೆ ತುಹಿನಗಿರಿ ಚಾಮುಂಡಿಯಂ;
ಗಂಗೆ ಓಲೈಸಿಹಳು ಕಾಣ್ ತಾಯಿ ತಂಗೆಯಂ;
ನಿನ್ನ ಮಗಳಭ್ಯುದಯ ನಿನಗಭ್ಯುದಯಮಲ್ತೆ
ಬಾರಮ್ಮ ದೇವಿ,
ಓ ತಾಯಿ ಭಾರತಿಯೆ, ನಿನ್ನಮಗಳನು ಹರಸಿ
ಹಾಡು ಓಂ ಶಾಂತಿಯಂ!
ನಿನ್ನ ಋಷಿ ಜನ ಬರಲಿ,
ನಿನ್ನ ಕವಿ ಜನ ಬರಲಿ,
ನಿನ್ನ ಗುರು ಜನ ಬರಲಿ,
ನಿನ್ನಖಿಲ ಶ್ರೀವಿಭೂತಿಗಳೆಲ್ಲರೈತರಲಿ,
ಕನ್ನಡಾಂಬೆಯ ಹರಸಿ ಹಾರೈಸಲಿ:

ಬರಿಯ ಚದರಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ;
ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶ ವಿಸ್ತೀರ್ಣಮಂ.
ಮರೆಯದಿರು ಚದರಸಂವತ್ಸರದ ಶತಮಾನಗಳ ಕಾಲವಿಸ್ತೀರ್ಣಮಂ,
ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ,
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ!

ಓ ಏಳು, ನೃಪತುಂಗದೇವ,
ಕೃಪೆಯಿಟ್ಟು ಕವಿರಾಜಮಾರ್ಗದರಮನೆಯ ಸಿಂಹಾಸನವನಿಳಿದು ಬಾ
ಕರ್ಣಾಟಕದ ನಿನ್ನ ಈ ಹೆಸರ ತಾಯ್ನೆಲಕೆ.
ನೀನಂದು ಹಾಡಿದಾ ಕನ್ನಡದ ನಾಡು
ಒಂದುಗೂಡಿದೆ ಇಂದು ಇದೊ ಬಂದು ನೋಡು.
ಸಂವತ್ಸರ ಸಹಸ್ರ ಸೋಪಾನಪಂಕ್ತಿಗಳನಿಳಿದು ಬಿಜಯಗೈ
ಪುಣ್ಯದೀಪಾವಳಿಯ ದಿನದ ಈ ರಾಜ್ಯೋದಯ ಮಹೋತ್ಸವಕ್ಕೆ.
ಇಳಿದು ಬರುವಾ ದಾರಿಯೊಳ್ ನಿಂತಿಹರು ಸಾಲುಸಾಲಾಗಿ

ಕನ್ನಡದ ಕುಲದೀಪಧಾರಿಗಳು, ಅವರನೂ ಕರೆದು ತಾ.
ಅಲ್ಲಿ ದೊರೆ, ಇಲ್ಲಿ ಕವಿ, ಅಲ್ಲಿ ಸೇನಾನಿ;
ಇಲ್ಲಿ ಗಾಯಕ, ಅಲ್ಲಿ ಶಿಲ್ಪಿ;
ಇಲ್ಲಿ ಗುರು, ಅಲ್ಲಿ ರಸಋಷಿ ಮತ್ತೆ ಅನುಭಾವಿ;
ದಾರ್ಶನಿಕ, ದ್ರಷ್ಟಾರ, ಸರ್ವಶಾಸ್ತ್ರಜ್ಞಾನಿ;
ಒಬ್ಬರೆಯೆ? ಇಬ್ಬರೆಯೆ? ಕೋಟಿ ಕೋಟಿ!
ಕಡಗ, ಕುಡುಗೋಲು, ಲೆಕ್ಕಣಿ, ಮೇಟಿ!
ಹೆಸರಾಂತವರಿಗಿಂತಲೂ ಹೆಸರ ದೌರ್ಬಲ್ಯವನು ದಾಟಿ
ನಿಂತಾ ಮಹಾತ್ಮರೆಯೆ ಕೋಟಿ ಕೋಟಿ!
ಎಲ್ಲರನು ಕರೆದು ತಾ ಇಂದಿನುತ್ಸವಕ್ಕೆ.
ನಿಮಗೆಲ್ಲ ಸೊಗಮಕ್ಕೆ, ನಿಮಗೆಲ್ಲ ಜಯಮಕ್ಕೆ,
ನಿಮ್ಮ ಆಶೀರ್ವಾದ ನಮಗೆ ಶುಭಮಕ್ಕೆ!
ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ।
ಪೃಥಿವೀ ಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ।
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ।
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ॥

೧-೧೧-೧೯೫೬

## ಏಕೈಕ ಕರ್ನಾಟಕ

ಕನಸು ನನಸಾಯಿತಿದೊ ಏಕೈಕ ಕರ್ನಾಟಕ:
ಕಣ್‌ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪತ!

ಕಾವೇರಿ ಸಿರಿಯಡಿಯ, ಗೋದಾವರಿಯ ಮುಡಿಯ,
ಮೂಡುಮಲೆಯೆಡದ ಗಡಿಯ,
ಪಡುಗಡಲ ಬಲದ ತಡಿಯ;
ವರ್ಣಶಿಲ್ಪದ ಕಲೆಯ ಚೆಲ್ವಿನ ಶಿಲೆಯ ಗುಡಿಯ,
ಕನ್ನಡದಿಂಪು ನುಡಿಯ;
ಕನಸು ನನಸಾಯಿತಿದೊ ಏಕೈಕ ಕರ್ಣಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!

ಶಿಶುರೂಪಿ, ಪಶುರೂಪಿ, ಜನರೂಪಿ, ಮನರೂಪಿ,
ನವ್ಯಸಾದ್ವಲ ರೂಪಿ,
ಕಲಕಲ ಪಕ್ಷಿರೂಪಿ;
ನವಸರೋವರದಂತೆ, ನವಶಾಲಿವನದಂತೆ,
ನವಯೌವನದ ಮೊದಲ ನವಧೂವರರಂತೆ;
ನವಕವಿಯ ನವರಸ ನವೀನ ಕೃತಿಯಂತೆ,
ದಿವ್ಯವೀಣಾಗಾನ ಗತಿಯಂತೆ;
ಮೂಡುತಿದೆ ನೋಡು ಅದೊ ಏಕೈಕ ಕರ್ನಾಟಕ:
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ!

ಕನ್ನಡದ ಮಕ್ಕಳಿರ, ಬನ್ನಿರೈ ಓ ಬನ್ನಿ;
ತನ್ನತನದನಿತನೂ ನಿವೇದಿಸಲು ತನ್ನಿ;
ತಿರೆಕಿವುಡು ಸೀಳ್ವಂತೆ ನೀಳಿಂಚರದೊಳೆನ್ನಿ:
"ಬಾರತಾಂಬೆಯ ಕನ್ಯೆ ಕನ್ನಡಾಂಬೆಯೆ ಧನ್ಯೆ!
ಜಯತು ಜಯ್!
ಜಯತು ಜಯ್!
ಜಯತು ಜಯ್! ಜಯ್! ಜಯ್!"

೧೬-೧೦-೧೯೪೧

## ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ

೧

ಶ್ರೀನಿವಾಸ ಕೃಪೆಯೊಳೆಮ್ಮ ದೊರೆಯ ಪರೆಯಲಿ!
ನಮ್ಮ ರಾಜ, ನಮ್ಮ ದೊರೆ ಚಿರಾಯುವಾಗಲಿ!
ಜಯ ಜಯ ಜಯ ಎನ್ನುತೆಲ್ಲ
ವಿಜಯಭೇರಿ ಹೋಡೆಯಿರಿ!
ಮೊಳಗಿ ಕೂಗಿರಿ! ಜಯತು ಎನ್ನಿರಿ!
ಜಯದ ಘೋಷ ಗಗನಕೆದ್ದು
ದಿವಿಜರನ್ನು ಕರೆಯಲಿ:

ಗಗನದಿಂದ ಪುಣ್ಯ ಕುಸುಮ ಸರಿಯು ಸುರಿಯಲಿ!
ಕಹಳೆಗಳಿರ ಕೂಗಿರೈ
ವೀಣೆಗಳಿರ ಹಾಡಿರೈ
ದನಿಯ ಬೀರಿ ವಾದ್ಯಗಳಿರ ಮೆರೆದು ನಲಿಯಿರೈ!
ದೋಳುಗಳಿರ ಬಡಿಯಿರೈ
ಗುಂಡುಗಳಿರ ಸಿಡಿಯಿರೈ
ದಂಡುಗಳಿರ ನಡೆಯಿರೈ!
ನಮ್ಮ ರಮ್ಯ ಪುರದೊಳಿಂದು
ಬೆಳ್ಳಿಹಬ್ಬವೆಂಬ ಸುದ್ದಿ
ವಿಶ್ವಕೆಲ್ಲ ತಿಳಿಯುವಂತೆ ಕೂಗಿ ಸಾರಿರೈ!
ಇಂದುಮಹಿಷಪುರವೆ ಸಗ್ಗ
ಎಂದು ಜನರೆ ನಲಿಯಿರಿ!
ಕರೆದು ಕೂಗಿರಿ! ಜಯತು ಎನ್ನಿರಿ!
ನಮ್ಮ ದೊರೆಯ ಕೊರಲಿಗಲರ
ವಿಜಯ ಮಾಲೆಗಳನು ಹಾಕಿ ನಲಿವ ಬನ್ನಿರಿ!

೨

ಬನ್ನಿ ರಮ್ಯ ವನಗಳೆ,
ಬನ್ನಿ ಪುಣ್ಯ ನದಿಗಳೆ,
ಬನ್ನಿ, ಋಷಿಗಳಿಂದ ಪೂಜ್ಯವಾದ ಗಿರಗಳೆ!
ಬಾರ ಕಡಲ ರಾಜನೆ,
ಬಾರ ಹೇ ದಿನೇಶನೆ,
ಬಾರ ಶಾಂತಿನಿಲಯ, ಬಾರ ಹೇ ಸುಧಾಕರ!
ಬನ್ನಿ ತಾರೆಗಳಿರ ಬನ್ನಿ,
ನಿಮ್ಮ ಕಾಣಿಕೆಗಳ ತನ್ನಿ,
ಕೃಷ್ಣನೃಪನ ಬೆಳ್ಳಿಹಬ್ಬಕೆಲ್ಲ ಬನ್ನಿರಿ!
"ಧನ್ಯ, ಧನ್ಯ, ಕೃಷ್ಣನೃಪಗೆ ಜಯತು" ಎನ್ನಿರಿ!
ಬನ್ನಿ ದಿವಿಜರೆಲ್ಲ ಬನ್ನಿ,
ನಿಮ್ಮ ಹರಕೆಗಳನು ತನ್ನಿ,
"ಜಯತು ಅಮೃತ ನೃಪಗೆ" ಎನ್ನಿ!
ಮಂಗಳದ ಮಳೆ ಕರೆಯಲಿ;
ಪುಷ್ಪವರ್ಷ ಹರ್ಷವರ್ಷವಾಗೆ ಸುರಿಯಲಿ;

ಕೃಷ್ಣಭೂಪನಮಿತಕಾಲ ನೆಲವ ಪೊರೆಯಲಿ;
ನಮ್ಮ ರಾಜನುಪವನಗಳ ಪುರವ ಸೃಷ್ಟಿಸಿ
ನಡುವೆ ಇರುವನೆಂದು ನೀವು ನಾಚಬೇಡಿರಿ,
ಬನ್ನಿ ರಮ್ಯ ವನಗಳೆ,
ನಿಮಗೆ ಸುಖಾಗಮನವು!
ಚೈತ್ರಸುಮದ ಸಿರಿಯನೆಲ್ಲ ದೊರೆಗೆ ಅರ್ಪಿಸಿ;
ಬರುತ ನಿಮ್ಮ ತಳಿರ ಸಿರಿಯ ಕೊಂಡುಬನ್ನಿರಿ!
ನಿಮ್ಮ ನಗುವ ದೀಪ ಕೋಟಿ
ಗೆಮ್ಮ ಒಡೆಯನರಸನೆಂದು
ನಾಚಬೇಡಿ ಚುಕ್ಕಿಗಳಿರ, ಹೇ ಸುಧಾಕರ;
ನಿಮಗೆ ಸದಾ ಸುಖಾಗಮನ ಬನ್ನಿರೆಲ್ಲರು!
ಬರುತ ನಮ್ಮ ರಾಜಗಾಗಿ ಜೋತಿಮಾಲೆಯ
ಥಳಿಪ ದಿವ್ಯ ಕಾಣಕೆಯನು ತನ್ನಿರೆಲ್ಲರು.
“ಕೃಷ್ಣರಾಜ ಶರಧಿ” ಗೆಮ್ಮ ಜನಪನೊಡೆಯನು
ಎನ್ನುತಂಜಬೇಡ ನೀನು, ಕಡಲರಾಜನೆ:
ದಯೆಯ ಬೀಡು ನಮ್ಮ ದೊರೆಯು ನಿನಗೆ ಸ್ವಾಗತ!
ಬರುತ ನಿನ್ನ ಕಪ್ಪವಾಗಿ ಕಡಲ ಸಿರಿಯ ತಾ:
ನೀಲಮೇಘಮಾಲೆಗಳನು ಕರದಿ ಹಿಡಿದು ಬಾ!

೩

ಘಣಘಣಿಸಿರಿ, ಘಣಘಣಿಸಿರಿ
ಗುಡಿಯ ಗಂಟೆಗಳಿರ ನೀವು:
ಜಯ ಜಯ ಜಯ! ಜಯ ಜಯ ಜಯ!
ವರನೃಪಾಲಗೆಂದು ಬೀರಿ
ಮಂಗಳಸ್ವನಂಗಳಂ!
ಥಳಿಸಿ ಬೆಳಗಿ! ಥಳಿಸಿ ಬೆಳಗಿ! ಬೆಳಗಿ ಥಳಿಸಿರಿ
ಮಂಗಳಾರತಿಗಳೆ ಪುಣ್ಯನೃಪನ ಶೀಲವ!
ಸಾರಿ ಶಂಖಗಳಿರ ಭೂಪನಮಲ ಚರಿತ್ರೆಯ
ಸಾರಿ ಜಾಗಟೆಗಳೆ ಲೋಕಕವನ ನೀತಿಯ!
ಬೆಳ್ಳಿ ಹಬ್ಬದುತ್ಸವಗಳೆ ಹೊರಡಿ ಹೊರಡಿರಿ;
ದೊರೆಯ ವರಪವಿತ್ರ ಸಿರಿಯ ಜಗಕೆ ಹರಡಿರಿ!
ಬಾರ ಮಧುನೃಪಾಲದೂತ, ಮಧುರ ಕೋಗಿಲೆ,

ಬೆಳ್ಳಿ ಹಬ್ಬವೆಂಬ ಶುಭದ
ವಾರ್ತೆಯನ್ನು ಕೊಂಡುಹೋಗು ವರ ವಸಂತೆಗೆ!
ಬರಲಿಯವನು ಚೇತ್ರನೊಡನೆ
ನಗ್ನಕಾಂತಿಯಿಂದ ಮೆರೆವ
ಕೆಂಪು ಬಿಳಿದು ಹಳದಿ ನೀಲ
ವಿವಿಧ ಬಣದಿಂದ ವೆರೆವ
ತೋರಣಾಳಿಗಳನು ಕಟ್ಟಿ ಬೆಳ್ಳಿ ಹಬ್ಬಕೆ!
ಬೀಸು, ಬೀಸು, ಸುರಭಿ ಭರಿತ ಮಲಯಜಾನಿಲ.
ಮೋಡಗಳಿರ ಬನ್ನಿ ಬೇಗ, ಬೇಗೆಯಡಗಲಿ;
ದೇಶವೆಲ್ಲ ಹಸರುರಿನಿಂದ ಶಾಂತವಾಗಲಿ!

೪

ತೆರಳು, ತೆರಳು, ತೊಲಗು ಬೇಗ
ಎಲೆ ದರಿದ್ರಲಕ್ಷಿಮಿಯೆ!
ಶುಭದ ಬೆಳ್ಳಿ ಹಬ್ಬಕ್ಕಾಗಿ
ರಾಜ್ಯಲಕ್ಷ್ಮಿ ಬಾರೆಲೌ!
ಓಡು, ಓಡು ನಿಲ್ಲಬೇಡ ಕ್ಷಾಮಮಾರಿಯೆ;
ಬಾರೆಲವ್ವ ಮಂಗಳೇ ಸುಭಿಕ್ಷದೇವಿಯೆ!
ರೋಗುರುಜೆಗಳಿಂದು ಗಡಿಯ ದಾಟಿ ಹೋಗಲಿ,
ಶಾಂತಿಗಳೆಲ್ಲ ನಿತ್ಯವಾಗಿ ಬಾಳಲಿ!
ಕಿಟ್ಟದೆಲ್ಲ ಬೆಳೆಯಲಿ;
ಒಳಿತೆಲ್ಲ ಬೆಳೆಯಲಿ;
ಕೋಪ ತಾಪ ಸುಳ್ಳು ಸಿಟ್ಟು
ಭಯವು ಹೇಡಿತನಗಳೆಲ್ಲ ಮಸಣ ಸೇರಲಿ;
ಧರ್ಮ ಸತ್ಯ ಧೈರ್ಯ ಶಾಂತಿಯೆಲ್ಲ ಕೊನರಲಿ;
ಬೆಳ್ಳಿಹಬ್ಬವಿಂದು, ಪಾಪ ಬೆಂದು ಹೋಗಲಿ;
ಪುಣ್ಯವೆಂಬ ಪರಮಪೈರು ಬೆಳೆದು ಫಲಿಸಲಿ!
ಕತ್ತಲೆಲ್ಲವಡಗಲಿ,
ಸುತ್ತಲುದಯವಾಗಲಿ;
ಚಿತ್ತಭಿತ್ತ ಶುದ್ಧವಾಗಿ
ಜೀವನಲ್ಲಿ ಮೆರೆಯಲಿ!

ಬೆಳ್ಳಿಹಬ್ಬವಿಂದು ಮೃತ್ಯು ಸತ್ತು ಹೋಗಲಿ;
ಅಮೃತಪಾನಮಾಡಿ ಎಲ್ಲರಮರರಾಗಲಿ!

೫

ಧನ್ಯ ಧನ್ಯ ಪುಣ್ಯಹೃದಯ ಕೃಷ್ಣನೃಪವರ,
ಧನ್ಯಧನ್ಯ ಲೋಕಮಾನ್ಯ ರಾಜಭೂಸುರ!
ರಾಜಋಷಿಯೆ ಕರ್ಮಯೋಗಿ ನಿನಗೆ ಮಂಗಳಂ;
ಆತ್ಮವೀರ ಧರ್ಮಧೀರ ನಿನಗೆ ಮಂಗಳಂ;
ನಿನ್ನ ನೀತಿಯೊಲಮೆ ದಯೆಗಳ್
ಇತರ ರಾಜರೆದೆಗೆ ತಗುಳಿ ಮುಕ್ತಿಗೊಯ್ಯಲಿ;
ನಿನ್ನ ಬಿಳಿಯ ಬಾಳಿನಿಂದ
ಅವರ ಧರ್ಮವರಿಯಲಿ!
ಸಗ್ಗದೆಡೆಯೊಳಿಹುದು ಶಿರವು, ಪಾದ ನೆಲದೊಳು;
ಮುಕ್ತಿ ಶ್ರೀಯನೊಂದು ಕೈಲಿ,
ರಾಜಯಶ್ರೀಯನೊಂದು ಕೈಲಿ,
ಹಿಡಿಯುತಿಹವ ಪರವನೆರಡ ಸಾಧಿಸಿರುತಿಹೆ!
ಆತ್ಮಸಿರಿಯ ಮೀರಿದಾವ ಸಿರಿಯ ಬಲ್ಲೆವು?
ನೆಲದ ಸಿರಿಯ, ಕೀರ್ತಿಸಿರಿಯ,
ಭೋಗಸಿರಿಯ, ಸರ್ವಸಿರಿಗಳನ್ನು ಮೀರಿದೆ;
ಮರ್ಮದಿಂದ ಧರ್ಮವರಿತು
ಜನಕನಂತೆಯಾಳುತಿರುವೆ ಧನ್ಯ ನೃಪಋಷಿ!
ಧರ್ಮಮಾರ್ಗವೆಂಬುದೊಂದೆ ಕೀರ್ತಿಮಾರ್ಗವು,
ಪ್ರೇಯವದುವೆ, ಶ್ರೇಯವದುವೆ,
ಅದುವೆ ಮುಕ್ತಿಮಾರ್ಗವು.
ದೇವರಂಥ ಸಾಧುಸಂತ
ರಿಂದ ದೇವನಿರುವನೆಂದು ಜನರ ನಂಬಿಕೆ.
ಹೇ ಪವಿತ್ರರಾಜ ಋಷಿಯೆ,
ದೇವರನ್ನು ಬಿಂಬಿಸಿಹುದು
ಶುಭ್ರವಾದ ನಿನ್ನ ಅಮಲ ಎದೆಯ ಕನ್ನಡಿ!
ದೊರೆಯೆ ದೇವರೆಂಬ ನುಡಿಯು ಧನ್ಯವಾಯಿತು,
ಮಾನ್ಯವಾಯಿತು, ಗಣ್ಯವಾಯಿತು,
ನಿನ್ನ ಶೀಲದಿಂದ, ಹೇ ನೃಪಾಲತಿಲಕನೆ:

ಗುಣದಿ ಪೂಜ್ಯನಾದೆ ನೀನು ಹಣದಿಯಲ್ಲವು!
ಹರಿಶ್ಚಂದ್ರ, ರಾಮ, ಕೃಷ್ಣ,
ಚಕ್ರವರ್ತಿ ವರ ಅಶೋಕ,
ಯಧಿಷ್ಠಿರಾದಿ ಮಹಾನೃಪರ
ನಾಮಮಾಲೆಯಲ್ಲಿ ನಿನ್ನ ನಾಮ ಮೆರೆವುದು!
ಸೂರ್ಯಚಂದ್ರರಿರುವತನಕ,
ಎಳೆಯೊಳಿರುವತನಕ ಧರ್ಮ,
ಜಗದ ಕಂಗಳನ್ನು ಹಿಡಿದು,
ಜಗದ ಜಿಹ್ವೆಯನ್ನು ಹಿಡಿದು,
ನೀಲನಭದಿ ಹಾರುತಿರಲಿ
ನಿನ್ನ ಕೀರ್ತಿ ಕೇತನ!
ಘೋರಮಳೆಯು ಸುರಿಯಬಹುದು,
ಚಂಡಗಾಳಿ ಬೀಸಬಹುದು,
ಸಿಡಿಲು ಮಿಂಚು ಬಡಿಯಬಹುದು;
ಹರಿಯದೆಂದು; ಬೀಳದೆಂದು,
ಧರ್ಮವನ್ನು ಸಾರಿ ತೋರಿ
ಹಾರಿ ನಲಿಯುತಿರಲಿ ನಿನ್ನ ಕೀರ್ತಿ ಕೇತನ!

೬

ಕಾವ್ಯ ಶ್ರೀಯು ಬಂದು ನಿನ್ನನೊಲಯಿಸುವಳು,
ಕಲಾಲಕ್ಷ್ಮಿ ಬಂದು ನಿನ್ನ ಸೇವೆಗೈವಳು,
ಕಬ್ಬದಬ್ಬೆ ಸದಾ ನಿನ್ನ ಪೂಜೆ ಮಾಳ್ಪಳು;
ಗಾನದೇವಿ ಬಂದು ನಿನ್ನನಾದರಿಸುವವಳು,
ವೇಣು, ವೀಣೆ, ಜಾಣಚಾಣ, ಕುಂಚ, ಲೇಖಣಿ,
ಎಲ್ಲ ನಿನ್ನನೊಲಿಯುತಿಹವು, ನೃಪಶಿರೋಮಣಿ!
ರಾಜ ಋಷಿಯು, ರಸಿಕ ಋಷಿಯು,
ಧರ್ಮ ಋಷಿಯು, ಕರ್ಮ ಋಷಿಯು,
ಜ್ಞಾನಭಕ್ತಿಋಷಿಗಳೆಲ್ಲ ನಿನ್ನೊಳಿರುವರು!
ಪ್ರಜೆಗಳಾದ ನಾವು ನಿನ್ನ
ಹೊಂದಿ ಧನ್ಯರಾದೆವು;
ನಿನ್ನ ಸೇವೆ ಗೈದು ನಾವು ಮಾನ್ಯರಾದೆವು.
ಬನ್ನಿ ಬನ್ನಿ ಜನಗೆಳಲ್ಲ, ಸೇರಿ ಸಭೆಯಲಿ:

“ಧನ್ಯ ಧನ್ಯ ಯೋಗಿಮಾನ್ಯ ಕೃಷ್ಣನೃಪವರ!”
ಎಂಬ ನಿಮ್ಮ ಹರ್ಷಘೋಷ ಗಗನಕೇಳಲಿ!

೭

ದೊರೆಯೆ ನಿನ್ನ ಹೃದಯದಾಳ ಕಡಲಿನಾಳವು;
ಗಗನದಂತೆಯಿಹುದು ನಿನ್ನ ಮನದ ಬಿತ್ತರ!
ಬೇದಭಾವ ರಹಿತ ನೀನು;
ವೇದವರಿತ ಸಾಧು ನೀನು;
ರಾಮಕೃಷ್ಣ ಪರಮಹಂಸ, ಶ್ರೀವಿವೇಕರು
ದೇಶದೇಶಗಳಲಿ ಸಾರಿ ಸಾರಿ ಹೇಳಿದ
ಸರ್ವಧರ್ಮ ಸಮನ್ವಯ
ಕಾರ್ಯದಲ್ಲಿ ತೋರಿಸಿರುವೆ, ನೀನೆ ಧನ್ಯನು!
ಹಿಂದು, ಮುಸಲ, ಕ್ರೈಸ್ತ, ಜೈನ
ಎಂಬ ಭೇದ ಭಾವವಿಡದೆ
ರಾಮರಾಜ್ಯವಾಳುವೆ!
ಬೇರೆ ಬೇರೆ ಗಿರಿಗಳಲಿ ಜನಿಸಿ ಹರಿದರೂ
ಬೇರೆ ಬೇರೆ ನಾಮಗಳನು ಧರಿಸಿ ಹರಿದರೂ
ಹೊಳೆಗಳೆಲ್ಲ ಕಡೆಗೆ ಕಡಲ ಪಾಲೆ ಎಂಬುವ
ಮರ್ಮವರಿತ ಋಷಿಯು ನೀನು, ಧರ್ಮವೀರನೆ!
ಮಾರ್ಗವಮಿತ, ನಿಲಯವೊಂದೆ;
ರೂಪವಮಿತ, ಸಿಹಿಯದೊಂದೆ;
ನಾಮವಮಿತ, ಜಲವದೊಂದೆ;
ಎಂಬ ತತ್ತ್ವವರಿತು ನೀನು ಮುಕ್ತನಾಗಿಹೆ!
ಮತದ್ವೇಷವನ್ನು ಬಿಟ್ಟು
ಮತಭ್ರಾಂತಿಯನ್ನು ಬಿಟ್ಟು
ಭಾರತೇಯರೆಲ್ಲ ನಿನ್ನ
ನೋಡಿ ಧರ್ಮ ವಿಷಯಗಳಲಿ
ಸಹನೆಯನ್ನು ಕಲಿಯಲಿ.
ಬ್ರಾಂತಿಕ್ರಾಂತಿ ಎಲ್ಲವಡಗಿ ಸತ್ಯ ತುಂಬಲಿ;
ಶಾಂತಿ ಸುಖವು ನಿನ್ನ ರಾಜ್ಯದಲ್ಲಿ ನೆಲಸಲಿ!

೮

ದೊರೆಯೆ ಕವಿಯ ಹಕ್ಕಿನಿಂದ ನಿನ್ನ ಕೇಳ್ವೆನು,
ಹೆಮ್ಮೆಯಿಂದ ಬೇಡುವೆ — ಸ್ವಾ
ತಂತ್ರ್ಯದಿಂದ ಬೇಡುವೆ,
ಮನ್ನಿಸೆನ್ನನಾಲಿಸು!
ಜನರ ಮತವೆ ಕವಿಯ ಮತವು,
ಅವರ ಹಿತವೆ ಕವಿಯ ಹಿತವು,
ಅವರ ವಾಣಿ ಕವಿಯ ವಾಣಿ, ಮನ್ನಿಸಾಲಿಸು!
ನಡಸು ಎಮ್ಮನೆಲ್ಲ ನಿನ್ನ ಮಧ್ಯಮಾರ್ಗದಿ,
ಇಹವ ಸಾಧಿಸುತ್ತ ಪರವ ಪಡೆವ ಮಾರ್ಗದಿ!
ಕಾವ್ಯರಸವ ಹೀರಿ ಜನರು
ಹರ್ಷಪಡುವ ತೆರದಿ ಮಾಡು, ನೀಡು, ವಿದ್ಯೆಯ!
ಪೂರ್ವಪಶ್ಚಿಮೆಂಬ ಬೇದ ವಿದ್ಯೆಗಿಲ್ಲವು;
ಯಂತ್ರವಿದ್ಯೆಯನ್ನು ಹೊಯ್ದು ವೇದವಿದ್ಯೆಗೆ,
ಅತಿಯ ಬಿಡಿಸಿ ಮಿತಿಯ ಹಿಡಿಸು,
ರಾಜ ಋಷಿವರ!
ಯಾರು ಅರಿಯದಂಥ ಮಹಾಕವಿಗಳಿರುವುರು,
ಜಗವ ಬೆರಗು ಮಾಡಬಲ್ಲ
ಚಿತ್ರಗಾರರಿರುವರು,
ಶಿಲ್ಪತಿಲಕರಿರುವರು.
ಕಲಾವನಿತೆಯೊಲಿದ ಜನರ ಲಕ್ಷ್ಮಿಯೊಲಿಯಳು,
ಲಕ್ಷ್ಮಿಯೊಲಿಯದಿರುವ ಕಲೆಗೆ ಇಲ್ಲ ಗೌರವ,
ನಿನ್ನು ದಾರಶೀಲ ಸುರಿವ ಮಳೆಯ ಹನಿಯೊಳು
ಹನಿಯದೊಂದೆ ಹನಿಯಲವರ ದಿವ್ಯಶಿರದೊಳು;
ನಿನ್ನ ಕೀರ್ತಿ ಬೆಳೆವುದು,
ಜಗದ ಕಲೆಯು ಬೆಳೆವುದು,
ನಿನ್ನ ರಾಮರಾಜ್ಯ ದೇವನಿಲಯವಪ್ಪುದು!
ಕವಿಯ ಹಕ್ಕಿನಿಂದ ನಾನು ನಿನ್ನ ಬೇಡುವೆ,
ಸ್ವಾರ್ಥಕಾಗಿ ಬೇಡುವೆ! - ಪ
ರಾರ್ಥಕಾಗಿ ಬೇಡುವೆ! - ಸ್ವಾ
ತಂತ್ರ್ಯದಿಂದ ಬೇಡುವೆ!
ಹೆಮ್ಮೆಯಿಂದ ಸಿಂಹದಂತೆ ಬೇಡುತಿರುವೆನು;
ಕೃಷ್ಣರಾಜ ಕೃಷ್ಣನಂತೆ ನೀಡುವ ಭಿಕ್ಷವ!

ವಿಶ್ವಜನನಿ, ಯದುನೃಪಾಲ ಕುಲದ ದೇವತೆ,
ದೇವಿ, ತಾಯೆ, ಹೇ ಶ್ರೀ ಚಾಮುಂಡಿಯೆ,
ಬೆಟ್ಟವಿಳಿದು ಬಾರೆಲೌ!
ಪಟ್ಟಕಟ್ಟಿ ನೀನೆ ಪೊರೆದ
ಶ್ರೀಕೃಷ್ಣನೃಪಗೆ ಪರಮಕೃಪೆಯ ತಾರೆಲೌ!
ವೇದೃಷಿಗಳೆಲ್ಲ ಬನ್ನಿ,
ಯೋಗಿತಿಲಕರೆಲ್ಲ ಬನ್ನಿ,
ಪೂರ್ವಕವಿಗಳೆಲ್ಲ, ಬನ್ನಿ,
ಪೂರ್ವರಾಜರೆಲ್ಲ ಬನ್ನಿ,
ಕೀರ್ತಿಶೇಷರೆಲ್ಲ ಬನ್ನಿ,
ನಿಮ್ಮ ಹರಕೆಗಳನು ತಂದು 'ಸ್ವಸ್ತಿ' ಎನ್ನಿರಿ!
ಭೂಮಿದೇವಿ ಬಾರೆಲೌ;
ಭಾರತಾಂಬೆ ಬಾರೆಲೌ;
ಮಗನ ಬೆಳ್ಳಿ ಹಬ್ಬವೆಂದು
ಉಬ್ಬುತಿರುವ ಹೃದಯದಿಂದ
ಕನ್ನಡಾಂಬೆ ಬಾರೆಲೌ;
ನಿಮ್ಮ ಮುದ್ದು ರಾಜಮಗನ
ಬೆಳ್ಳಿಹಬ್ಬವಿಂದು ನಿಮಗೆ ಸುಖಾಗಮನವು!
ಬಾರೆಲವ್ವ ಭೂಮಿದೇವಿ, ಇತ್ತ, ಇತ್ತ ಬಾ;
ಪುತ್ರಗಾಗಿ ನೀನು ತಂದ ಹರಕೆಗಳನು ತಾ;
ಬಾರೆಲವ್ವ ಭಾರತಾಂಬೆ, ಇತ್ತ, ಇತ್ತ ಬಾ;
ಮಗನಿಗಾಗಿ ನೀನು ತಂದ ವರಗಳನು ತಾ;
ನಮ್ಮ ನಾಡ ತಾಯಿ ನೀನು,
ನಮ್ಮ ನೀನು ಅರಿಯೆ ಏನು?
ಅಮ್ಮ ಬಾರೆ ಕನ್ನಡಾಂಬೆ, ಇತ್ತ, ಇತ್ತ ಬಾ;
ಮುದ್ದಿಗಾಗಿ ನೀನು ತಂದ ದಾನಗಳನು ತಾ!
ಮೇಲೆ ನೋಡಿ! ಮೇಲೆ ನೋಡಿ!
ಗಗನವೆಲ್ಲ ರಂಜಿಸಿಹುದು!
ವೇದಋಷಿಗಳೆಲ್ಲರಿಳಿದು ಬರುತಲಿರುವುರ,
ಯೋಗಿವರ್ಯರೆಲ್ಲ 'ಸ್ವಸ್ತಿ' ಎಂದು ಬರುವರು,
ಪೂರ್ವಗಕವಿಗಳೆಲ್ಲ ಹಾಡಿ ಹಾಡಿ ಬರುವರು,

ಹುರಷದಿಂದ ರಾಜರೆಲ್ಲರಿಳಿದು ಬರುವರು!
ಅದೋ ನೋಡಿ! ಅದೋ ನೋಡಿ!
ಶ್ರೀ ವಿವೇಕರೊಡನೆ ಕೂಡಿ ಕರೆದು ಶಿಷ್ಯರ
ರಾಮಕೃಷ್ಣಪರಮಹಂಸರಿಳಿದು ಬರುವರು!
ಇತ್ತ ನೋಡಿ! ಇತ್ತ ನೋಡಿ!
ಬೇಡಕವಿಯ ಕೂಡಿ ಬಹನು ಬಾದರಾಯಣ;
ಕಪಿಲಋಷಿಯ ಕೂಡಿ ಬಹನು ಶಂಕರಾರ್ಯನು!
ಅದೋ ಅಲ್ಲಿ! ಅದೋ ಅಲ್ಲಿ!
ಗಾರ್ಗಿಯೊಡನೆ ಯಾಜ್ಞವಲ್ಕ್ಯನಿಳಿದು ಬರುವನು!
ಇತ್ತ ನೋಡಿ! ಅತ್ತ ನೋಡಿ!
ಅಲ್ಲಿ ಅಗೋ! ಇಲ್ಲಿ ಇಗೋ!
"ಸ್ವಸ್ತಿ ಸ್ವಸ್ತಿ" ಎನ್ನುತೆಲ್ಲ
ಗಗನತಳ್ವ ತುಂಬಿಯಿಳಿದು ಬರುತಲಿರುವರು!
ಇತ್ತ ನೋಡಿ! ಇತ್ತ ನೋಡಿ!
ನಗೆಯ ಜೊನ್ನವನ್ನು ಬೀರಿ
ಗುಂಪದೊಂದು ನಲಿದು ಬರುತಲಿರುವುದಾರದು?
ಓಹೊ ತಿಳಿಯಿತೋಹೊ ತಿಳಿಯಿತೀಗ ತಿಳಿಯಿತು!
ಯದುನೃಪಾಲವಂಶವೃಕ್ಷ
ದಲರಮಾಲೆ ಬರುತಲಿಹುದು;
ನೋಡಿ ಚಾಮರಾಜನಲ್ಲಿ;
ನೋಡಿ ಕೃಷ್ಣರಾಜನಲ್ಲಿ;
ಚಿಕ್ಕದೇವರಾಜನಲ್ಲಿ;
ನೋಡಿ, ಹಾಡಿ, ಹಾಡಿ ನೋಡಿ ಜನರೆ ನಲಿಯಿರಿ!
"ಜಯ ಜಯ ಜಯ! ಜಯ ಜಯ ಜಯ!
ಜಯತು ಪೂರ್ವರಾಜರುಗಳ್" ಎಂದು ಘೋಷಿಸಿ!
ಬನ್ನಿರಲ್ಲ, ಬನ್ನಿರೆಲ್ಲ ಧನ್ಯರಾದೆವು;
ದೊರೆಯ ಬೆಳ್ಳಿಹಬ್ಬವಿಂದು ವಿಶ್ವ ನಲಿಯಲಿ.
ರಾಮಕೃಷ್ಣ ಬಾರೆರೈ
ಶ್ರೀವಿವೇಕ ಬಾರೆರೈ
ವೇದವ್ಯಾಸ ಬಾರೆರೈ
ಕಾಳಿದಾಸ ಬಾರೆರೈ
ಬೇಡಕವಿಯೆ ಬಾರೆರೈ!

ದೇವಿಸೀತೆ ಬಾರೆಲೌ;
ಗೌರಿ ಗಾರ್ಗಿ ಬನ್ನಿರೌ;
ಮೈತ್ರೇಯಿ ಬಾರೆಲೌ!
ಬಾರೆಲವ್ವ ವೀರನಾರಿ, ದೇವಿ ದ್ರೌಪದಿ;
ಬಾರೆಲವ್ವ ಧನ್ಯ ನೃಪರನೊಲಿವ ಜಯಸಿರಿ!
ಬನ್ನಿರೆಲ್ಲ "ಸ್ವಸ್ತಿ" ಎಂದು ದೊರೆಯ ಹರಸಿರಿ;
ಕೃಷ್ಣರಾಜ ರಾಜಋಷಿಗೆ ವಿಜಯವಾಗಲಿ!
ಬೆಳ್ಳಿಹಬ್ಬವಾಗಿ ಹೊನ್ನಹಬ್ಬವಾಗಲಿ!
ಹೊನ್ನಹಬ್ಬ ಮುಗಿಯೆ ರನ್ನಹಬ್ಬವಾಗಲಿ!
ನಮ್ಮ ರಾಜ ನಮ್ಮ ದೊರೆ ಚಿರಾಯುವಾಗಲಿ!
ಶ್ರೀನಿವಾಸ ಕೃಪೆಯೊಳೆಮ್ಮ ದೊರೆಯ ಪೊರೆಯಲಿ!*

೧೯೨೭

---

* ಮೂವತ್ತು ವರ್ಷಗಳ ಹಿಂದೆ ಬರೆದ ಈ ಕವನ ಇದುವರೆಗೆ ಯಾವ ಸಂಕಲನದಲ್ಲಿಯೂ ಸೇರಿರಲಿಲ್ಲ. ಇದರ ಪ್ರತಿಯೂ ಕವಿಯ ಬಳಿ ಇರಲಿಲ್ಲ. ಮಿತ್ರರೊಬ್ಬರು ಅದರ ಪ್ರತಿಯನ್ನು ಒದಗಿಸಿ, ಅದನ್ನು ಇಲ್ಲಿ ಸೇರಿಸಲು ಅವಕಾಶ ಕಲ್ಪಿಸಿಕೊಟ್ಟುದಕ್ಕಾಗಿ ಅವರಿಗೆ ಕೃತಜ್ಞನಾಗಿದ್ದೇನೆ. ರಾಜತ್ವವೇ ಸಂಪೂರ್ಣವಾಗಿ ನಶಿಸಿ ಹೋಗಿರುವ ನವೀನ ಭಾರತದಲ್ಲಿ ಈ ಕವನಕ್ಕೆ ಒಂದು ಐತಿಹಾಸಿಕ ಮಾತ್ರವಾದ ಬೆಲೆ ಇರಬಹುದು ಅಲ್ಲದೆ ಈ ಕವಿಯ ಮೊದಲ ತೊದಲ ಭಾಷಾಸ್ವರೂಪ ಮತ್ತು ವಸ್ತು ಸ್ವರೂಪ ಏನಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಲೂಬಹುದು.

## ಅದ್ಭುತ ರಾಮಾಯಣ ಅಥವಾ ವಾಲ್ಮೀಕಿಗೊಂದು ಎಚ್ಚರಿಕೆ!

ಓ ತಾಯಿ ಸರಸತಿಯೆ, ನಿನ್ನ ಬೀಣೆಯ ಮೇಲೆ
ಕುಳಿತೇನ ಮಾಡುತಿವೆ ಈ ಗೂಬೆಗಳ ಮಾಲೆ?
ಒಂದೆರಡೆ? ಮೂರ್ನಾಲ್ಕೆ? ಐದಾರೆ? ಏಳೆ?
ಹೊರಳುತಿವೆ ಮೆಳ್ಳೆಗಣ್ಣುಗಳು ಸಾಲು ಸಾಲೆ!
ಅವುದೊ ಹಿರಿಯ ಚಿಂತೆ ಅಧ್ಯಕ್ಷಗೂಬೆಯ ತಲೆಯ ಸುತ್ತ
ನೊಣದಂತೆ ಹಾರಾಡಿ ವ್ಯೂಹವನು ರಚಿಸುತಿದೆ ಅತ್ತ ಇತ್ತ.
ಪಕ್ಕದೊಳದರ ಸಚಿವ ಹೊಗೆಸೊಪ್ಪ ಸೇದುತ್ತ
ತಲೆಗಣ್ಣ ಹೊರಳಾಡಿಸುತ ಕುಳಿತಿಹುದು ಉನ್ಮತ್ತ!

ಮತ್ತೊಂದಕೇನೊ ಕೆದರಿದಂತಿದೆ ಪಿತ್ತ.
ಅತ್ತೊಂದರಾ ಚಿತ್ತಸ್ಥಿತಿಯೊ ತತ್ತತ್ತತತ್ತಾ!

ದೇವಕವಿ ವಾಲ್ಮೀಕಿಯಾ ದಿವ್ಯ ಪರ್ಣಶಾಲೆ;
ಸುತ್ತಲೂ ಹಬ್ಬಿಹುದು ಸುಂದರ ಗಿರಿ ಅರಣ್ಯಮಾಲೆ.
ನೆತ್ತಿಯಲಿ ನಿಂತಿಹುದು ನೀಲಿಯಾಗಸ ಋಷಿಯ ಶಾಂತಿಯೋಲೆ.
ವನವ ತುಂಬಿದೆ ಪಕ್ಷಿಕೂಜನದ ಮಧುಕಂಠ ಮಧುರ ಲೀಲೆ.
ಬಳಿಯೆ ಹರಿದಿದೆ ಮಂದ ಮಂದಾಕಿನಿಯ ಶಾಶ್ವತಸಲಿಲಯಾತ್ರೆ
ನೀರ ರೂಪದಿ ಲೋಕಕಿಳಿದಿಹ ಪವಿತ್ರೆ ಆ ತ್ರಿಣೇತ್ರೆ.
ಏನಿದಚ್ಚರಿ! ಅಲ್ಲಿ ನೆರೆದಿಹುದೊಂದು ಗೂಬೆಗೊಟ್ಟಿ!
ಆದಿಕವಿಯೀ ದಿವ್ಯ ಪರ್ಣಕುಟಿಯೊಳೆಯೆ ಈ ಘೂಕಗೋಷ್ಠಿ?
ವ್ಯಾಸಪೀಠದ ಮೇಲೆ ಬಿಚ್ಚಿರುವುದೊಂದು ಭೂರ್ಜಪತ್ರದ ಪುಸ್ತಕ;
ಆ ಬಳಿಯೆ ಗರಿಯ ಚಾಪೆಯ ಮೇಲೆ ಪೇರೊಡಲ ವೀಣೆ!
ರಾಮಾಯಣವೆ ಆ ಪುಸ್ತಕ,
ಆ ವೀಣೆ ಲವಕುಶರ ವೀಣೆ!
ತೆರೆದ ಹಾಳೆಯ ಓದು: ಓ ಸುಂದರ ಕಾಂಡದಾದಿ!

ತಾಯಿ ಸೀತೆಯ ಕರೆಗೆ ಮೀಹಕೆಂದು
ಕವಿಯೊಡನೆ ಹೊಳೆಯ ದಂಡೆಗೆ ಓಡಿದರು ಲವನು ಕುಶನು.
ಬಿಚ್ಚಿದಾ ಪುಸ್ತಕಂ ಬಿಚ್ಚಿದಂತೆಯೆ ಇಹುದು ವ್ಯಾಸಪೀಠದಲಿ;
ಮಿಡಿಯುತಿರ್ದಾ ಬೀಣೆ ಮೌನವಾಂತಿಹುದಲ್ಲಿ ರಸಸಮಾಧಿಯಲಿ!
ಆಗಳೆಯೆ ಪರ್ಣಶಾಲೆಗೆ ಪೊಕ್ಕುದಾ ಗೂಬೆವಿಂಡು
ಕವಿವರನ ಮೇಣ್ ಕುಶಲವರ ಗೈರುಹಾಜರಿಯ ಕಂಡು!

"ಏನು ಅನ್ಯಾಯ! ಏನಿದೀ ಧೂರ್ತತನ! ಏನಹಂಕಾರ;
ಕವಿಯೆಂಬ ಹೆಮ್ಮೆಯಾ ಪಿತ್ತಕಿಕ್ಕಲೇಬೇಕು ಮದ್ದಖಾರ!
ಈ ಬೀಣೆಯಾ ಬುರುಡೆ ನಮ್ಮ ಹಕ್ಕೆಗೆ ತಕ್ಕ ಗುಹೆಯಲ್ತೆ?
ಅದನಿವನು ತಂದು, ಮಕ್ಕಳಾಟಕೆ ತಂತಿಯಿಕ್ಕಿ,
ಕರ್ಕಶದ ಸದ್ದು ಮೂಡಿಸುತಿಹನು ಕವಿಯೆಂದು ಸೊಕ್ಕಿ!
ಇನಿತೊಂದು ದೊಡ್ಡ ಹೊತ್ತಗೆಯನೆಯೆ ಬರೆದಿರುವನಾದರೂ
ನಮ್ಮೊಂದು ಪೆಸರ ನುತಿಗಯ್ಯದಿವನ ಬಿಮ್ಮು
ಬಿರಯುವಂತೆಸಗವೇಳ್ಕುಂ! ವೇ. . . .ಳ್ಕು. . . .ಮ್ಮೂ!!
ಬರೆ, ಸಚಿವ, ಒಂದೆಚ್ಚರಿಕೆಯೋಲೆಯಂ: —

'ಎಲವೊ ಕವಿ ವಾಲ್ಮಿಕಿ, ತಮ್ಮೊಂದಸಂತೋಷಮಂ
ನಿನಗೆ ತಿಳಿಸಲ್ಕಾಟಿಪುದು ಈ ಮಹಾ ಧ್ವಾಂಕ್ಷಾರತಿ ವಿದ್ವನ್ಮಂಡಲಂ!
ಎಚ್ಚರಿಕೆ! ಇನ್ನು ಮುಂದಾದೊಡಂ ನೀನಂತು
ನಮ್ಮನವಹೇಳನಂಗೈದೆಯಾದೊಡೆ ನಿನಗೆ. . .
ನಿನಗೆ. . . ನಿನಗೆ. . . ನಿ. . ." ನಗೆಕೇಳಿಸಿತು ಹೊರಗೆ!
ಕೇಕೆ ಹಾಕುತ ನುಗ್ಗಿದರು ಲವಕುಶರು ಒಳಗೆ!
ಹಾರೋಡಿದುವು ಗೂಬೆ ಬೆಳಕಂಡಿಯಿಂ ಪೊರಗೆ!

ಬೆನ್ನೊಳೆ ಒಳಗೆವಂದ ವಾಲ್ಮೀಕಿಗಾ ಲವಂ
"ಗುರುದೇವ ಈ ಗೂಬೆಗಳಿಗೇನು ಮಾಳ್ಪುದೊ ಕಾಣೆ!
ಹಾಳಾಗುವುದು ಇವರ ದೆಸೆಯಿಂದೆಮ್ಮ ವೀಣೆ.
ನಾವಿಲ್ಲದಾಗಳೆ ಬಂದು ಮಾಳ್ಪವು ಅಸಹ್ಯಮಂ,
ಕುಳಿತು ತಂತಿಯ ಮೇಲೆ."
"ಬಿಡು, ವತ್ಸ, ಬಾಗಿಲಿಗೆ
ತಡಿಕೆಯಂ ಬಿಗಿದರಾಯ್ತು!" ಎನುತೆ ಹಾಸ್ಯಕೆ ಮತ್ತೆ
"ಪಿಂತೆ ತುಂಬುರ ಮುನಿಗೆ ಕರುಬಿ ನಾರದನೊಂದು
ಗೂಬೆಯಿಂ ಸಂಗೀತಮಂ ಕಲ್ತು ಗಾನಯೋಗಿ
ತಾನಾದನೈಸಿ ಆ ಘೂಕಯೋಗಿಯ ನೆನೆದು
ಗೌರವಂದೋರಿವುಗಳಿಗೆ!" "ಕತೆ ಅದೇನ್, ಗುರದೇವ?"
"ಅದೊಂದು ರಾಮಾಯಣಾದ್ಭುತಂ! ನನ್ನ ರಾಮಾಯಣಕೆ ಮಿಗಿಲ್!
ನಾಳೆ ಪೇಳ್ವೆನ್. ಶುಚಿಗೆಯ್ದು ಮಿಡಿಯಿಮಾ ವೀಣೆಯಂ."*

೧೯೫೩

---

* ವಿಶ್ವವಿದ್ಯಾಯಾನಿಲಯ ಕವಿಗೆ ಒಂದು ಎಚ್ಚರಿಕೆಯ ನೋಟೀಸು ಕೊಟ್ಟ ಸಂದರ್ಭದಲ್ಲಿ ಮೂಡಿದ ವಿಡಂಬನೆ.

## ಧರ್ಮಸ್ಥಲ

ಹೃದಯ ಧರ್ಮಸ್ಥಲದಿ ನಿನ್ನಂತರಾತ್ಮನಿರೆ
ಅಂಜುತಿಹೆ ಏಕೆಲೆ ಅಗಸ್ತ್ಯ ಭ್ರಾತ?

ಅಲ್ಲಿ ಧರ್ಮಸ್ಥಳದಿ, ಹೇಳಿಗೆಯ ಹಾವಿನೊಲು,
ದೇಗುಲಕೆ ವಶನೆ ಹೇಳ್ ಮಂಜುನಾಥ?

ನಿನ್ನ ಭಯದುರಿಗೊಳ್ಳಿ ನಿನಗದುವೆ ಪಂಜೊಳ್ಳಿ;
ನಿನ್ನಳುಕೆ ನಿನಗೆ ಅಣ್ಣಪ್ಪಭೂತ!
ಉಪನಿಷತ್ತಿನ ಹಿರಿಯ ಧರ್ಮವನು ಕೆಳತಳ್ಳಿ
ಬೆದರಿಸುವ ಗುರ ಬಿಭೀಷಿಕಾ ಪ್ರೇತ!

ಎಲ್ಲಿ ಮತ್ಸರವಳಿದು ಮೈತ್ರಿ ಮೂಡುವುದಲ್ಲಿ
ಮೂಡಿತೆಂದೇ ತಿಳಿಯೊ ಧರ್ಮಸ್ಥಲ.
ಸುಲಿಗೆ ವಂಚನೆ ಹಿಂಸೆಗಳನುಳಿದವನ ಮನವೆ
ಮಂಜುನಾಥನ ಮಂಚ, ಹೃದಯಕಮಲ!

ಮೂಢ ಹೃದಯದ ಗೂಢ ಗಾಢಾಂಧಕಾರವನು
ಹೊರದೂಡದೆಯೆ ರೂಢಿ ಎಂಬ ನೆವದಿ
ಕಾಣಿಕೆಯ ಹೆಸರಿಟ್ಟು ಕಾಂಚನವನೆಳೆದಕೊಳೆ
ಜ್ಯೋತಿ ಮೂಡುವುದೆಂದೂ ಜಡದ ಜಗದಿ?

ನ್ಯಾಯ ಸಮ್ಮತವಲ್ಲ ಎಂಬುದದು ಮತವಲ್ಲ;
ನ್ಯಾಯ ನರನದು; ಧರ್ಮ ಈಶ್ವರನದು.
ಹೆಮ್ಮೆಯನು ಬಿಡು, ಹಿರಿಯ! ದಮ್ಮಯ್ಯನಿಡು ಜನಗೆ!
ನಿನ್ನಂತೆ ಸಂಸ್ಥೆಯ ನಶ್ವರವದು!

ಧರ್ಮಕೆ ಧರ್ಮಸಂಸ್ಥೆಗೆ ನಿಂದೆ ನನದಲ್ಲ;
ಧರ್ಮವೇಷದ ಅಧರ್ಮಕ್ಕೆ ಮುನಿದೆ.
ನಿಜದ ಧರ್ಮಸ್ಥಳಕೆ ನಿಜದ ಧರ್ಮಕೆ ಇದೆಕೊ
ಕೈಮುಗಿದೆ, ಮಣಿದೆ, ಹಿರಿದು ಕಿರಿದೆನದೆ!

೨೩-೪-೧೯೪೪

## ಕಂದ ಕನ್ನಡನಿವನು ಕೈಬಿಡದಿರಮ್ಮಾ

ಕಂದ ಕನ್ನಡನಿವನು ಕೈಬಿಡದಿರಮ್ಮಾ
ನೊಂದು ಬಂದಿಹನು ಹಾಲೂಡಿ ಪೊರೆಯಮ್ಮ!

ಕಂದಗಲ್ಲವೆ ಮೊದಲ ಪಾಳಿ ನಿನ್ನೆದೆಗಮ್ಮಾ?
ಕಂದನಲ್ಲವೆ ನಿನ್ನ ಜೀವದಾನಂದವಮ್ಮಾ?
ಕಂದನನು ತೊರೆದನ್ಯರಾ ಮಗುಗೆ ಮೋಹಮಾಡಿ
ಕಂದನೆಂದರೆ ಕರುಳು ಕಿಲಕಿಲ ನಗದೆ ಹೇಳಮ್ಮಾ?

ಹೆರರ ಮಕ್ಕಳ ಮೀರ ನಿನ್ನವನು ಚೆಲುವನಮ್ಮಾ.
ನೀನು ಒಲಿದರೆ ಮುಗಿಲ ಸರಿಸಕೆ ನಿಲುವನಮ್ಮಾ;
ವಿಶ್ವನೆ ಗೆಲುವನಮ್ಮಾ!
ಲೋಕವನ್ನೊಲಿಸುವನು, ನಿನ್ನನೂ ನಲಿಸುವನು,
ತಾನೊಲಿದು ನಲಿವನಮ್ಮಾ!

ನಿನ್ನ ತೊಡೆಯೇರಿ ಕೊರಳಪ್ಪಿಕೊಳ್ಳುವನಮ್ಮಾ:
ನಿನ್ನ ಕಂದನ ಬೇಡಿಕೆಯ ನೀಡಿ ಸಲಹಮ್ಮಾ!
ಮೊದಲೆನ್ನ ಸಿಂಗರಿಸಿ ಕಣ್ದಣಿಯೆ ನೋಡಿ ನಲಿಯಮ್ಮಾ:
ಮೊದಲು ಮುದ್ದಿಸು ನನ್ನ: ನಾ ನಿನ್ನೊಡಲು ಬಾಳುಸಿರಮ್ಮಾ!

೩೦-೫-೧೯೩೮

## ಅಖಂಡ ಕರ್ಣಾಟಕ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಕೂಗಾಟದ ರಾಜಕೀಯ ನಾಟಕ!
ಹರುಸಿತಿಹನು ದೇವ ಗಾಂಧಿ;
ಮಂತ್ರಿಸಿಹುದು ಋಷಿಯ ನಾಂದಿ;
ತನಗೆ ತಾನೆ ಋತಸ್ಯಂದಿ
ಅವಂದ್ಯೆ ಕವಿಯ ಕಲ್ಪನೆ!

ಒರ್ವನಾದೊಡೋರ್ವನಲ್ತು:
ಶಕ್ತಿ ಸರ್ವನಲ್ಪನೆ?
ಹಿಂದದೊಂದು ಹಿರಿಯ ಕನಸು:
ಇಂದು ಕೋಟಿ ಕೋಟಿ ಮನಸು
ಕೂಡಿ ಮೂಡಿ ನಿಂದ ನನಸು!
ತಡೆವುದೇನೊ ನಿನ್ನ ಕಿನಿಸು
ಒಣರುವಲ್ಪ ಜಲ್ಪನೆ?
ಭುವನ ವಂದ್ಯೆ, ಕೇಳ್, ಅವಂಧ್ಯೆ
ಕವಿಯ ವಿಂಧ್ಯಕಲ್ಪನೆ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಬೂಟಾಟದ ರಾಜಕೀಯ ನಾಟಕ!
ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಗನ್ನಡ ಸರಸ್ವತಿಯ
ವಜ್ರಕರ್ಣಕುಂಡಲ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ
ನೃಪತುಂಗನೆ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ!
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ:
ಸರಸ್ವತಿಯೆ ರಚಿಸಿದೊಂದು
ನಿತ್ಯ ಸಚಿವ ಮಂಡಲ,
ತನಗೆ ರುಚಿರ ಕುಂಡಲ!

ಅಖಂಡ ಕರ್ಣಾಟಕ:
ಅಲ್ತೊ ನಮ್ಮ ಕೀರ್ತಿಶನಿಯ ರಾಜಕೀಯ ನಾಟಕ
ಬರಿಯ ಹೊಟ್ಟೆ ಬಟ್ಟೆಗಲ್ತೊ;

ಪಕ್ಷ ಜಾತಿ ಕಲಹಕಲ್ತೊ;
ಹಮ್ಮು ಬಿಮ್ಮು ಸೊಮ್ಮಿಗಲ್ತೊ;
ಬಣ್ಣ ಚಿಟ್ಟೆ ಬಾಳಿಗಲ್ತೊ;
ಜೋಳವಾಳಿ ಕೂಳಿಗಲ್ತೊ;
ದರ್ಪ ಸರ್ಪ ಕರ್ಕೋಟಕ
ಸ್ವಾರ್ಥ ಫಣಾ ಕ್ರೀಡೆಗಲ್ತೊ;
ರಾಜಕೀಯ ಪೇಟಕ,
ಅಖಂಡ ಕರ್ಣಾಟಕ!

ಅಖಂಡ ಕರ್ಣಾಟಕ:
ಸರಸ್ವತಿಯೆ ರಚಿಸಿದೊಂದರಾಜಕೀಯ ತ್ರೋಟಕ!
ಮೆರೆಯಲಾತ್ಮ ಸಂಸ್ಕೃತಿ;
ಬೆಳಗೆ ಜೀವ ದೀಧ್ಮಿತಿ;
ಪರಮಾತ್ಮನ ಚರಣದೀಪ್ತಿ
ಶರಣ ಹೃದಯಗಳಲಿ ಹೊತ್ತಿ
ಉಸಿರುಸಿರಿನ ಹಣತೆ ಬತ್ತಿ
ಉರಿಯಲೆಂದು ತಣ್ಣಗೆ;
ಬಾಳ ಸೊಡರ್ಗುಡಿಯ ನೆತ್ತಿ
ತನ್ನ ಮುಡಿಯ ಬಾನಿಗೆತ್ತಿ
ಸೊಗಸಲೆಂದು ರಸಸ್ಫೂರ್ತಿ
ಭಗವಂತನ ಕಣ್ಣಿಗೆ;
ಹಾಡುತಿಹೆನು ಕಂಡ ನಾನು;
ದಿಟ್ಟಗೇಡೊ? ಹುಟ್ಟು ಕುರುಡೊ?
ಬುದ್ಧಿ ಬರಡೊ? ಬೇರೆ ಹುರುಡೊ?
ಮೆಳ್ಳಗಣ್ಣ, ಕಾಣೆ ನೀನು!
ಹೇಳು! ತಪ್ಪು ನನ್ನದೇನು?
ಕರ್ಣಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ?
ಮಂತ್ರ ಕಣಾ! ಶಕ್ತಿ ಕಣಾ!
ತಾಯಿ ಕಣಾ! ದೇವಿ ಕಣಾ!
ಬೆಂಕಿ ಕಣಾ! ಸಿಡಿಲು ಕಣಾ!
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿ ಕಣಾ

ಋಷಿಯ ಕಾಣ್ಬ ಕಣ್ಣಿಗೆ!
ವಿರೋಧಿಗಾಸ್ಫೋಟಕ,
ಕಂಡ ಕವಿಗಖಂಡ ದೇವಿ ಕಣಾ ಕರ್ಣಾಟಕ!
ಸರಸ್ವತಿಯೆ ರಚಿಸೊಂದರಾಜಕೀಯ ತ್ರೋಟಕ!
ವಿರೋಧಿಗಾಸ್ಫೋಟಕ,
ಅಖಂಡ ಕರ್ಣಾಟಕ:
ಅಲ್ತೊ ನಮ್ಮ ನರ್ತಿಪೊಂದು ರಾಜಕೀಯ ನಾಟಕ!
ಅಖಂಡ ಕರ್ಣಾಟಕ!
ಅಖಂಡ ಕರ್ಣಾಟಕ!
ಜಯ್ ಜಯ್ ಜಯ್ ಅಖಂಡ ಕರ್ಣಾಟಕ!

೨-೫-೧೯೪೯

## ಕರ್ಣಾಟಕ ಮಂತ್ರದೀಕ್ಷೆ*

*[ಕನ್ನಡನಾಡು ಒಂದಾಗಬೇಕೆಂದು ಹಂಬಲಿಸುವ ಕನ್ನಡ ಮಕ್ಕಳೆಲ್ಲ ಒಂದು ಮಹಾದಿನ ಶುಭಮುಹೂರ್ತದಲ್ಲಿ ತಮ್ಮ ಊರಿನ ಹೊಳೆಗೊ ಕೆರೆಗೊ ಗುಂಪಾಗಿ ನಡೆದು ಮಿಂದು ಮಡಿಯುಟ್ಟು ದೇವರಿಗೆ ಬಾಗಿ ಈ ದೀಕ್ಷೆ ಕೈಕೊಳ್ಳುತ್ತಾರೆ.]*

ದೀಕ್ಷೆಯ ತೊಡು ಇಂದೇ;
ಕಂಕಣ ಕಟ್ಟಿಂದೇ!
ಕನ್ನಡನಾಡೊಂದೇ;
ಇನ್ನೆಂದೂ ತಾನೊಂದೇ!

೧

ನೃಪತುಂಗನ ದೊರೆಮುಡಿ ಸಾಕ್ಷಿ!
ಪಂಪನ ಪೆದ ದೂಳಿಯ ಸಾಕ್ಷಿ!
ಕೂಡಲ ಸಂಗನ ಅಡಿ ಸಾಕ್ಷಿ!
ಗದುಗಿನ ಕವಿದೇವನ ಸಾಕ್ಷಿ!
ದೀಕ್ಷೆಯ ತೊಡು ಇಂದೇ . . . .

೨

ಇದು ಸಹ್ಯಾದ್ರಿಯ ಮೇಲಾಣೆ!
ಇದು ಕಾವೇರಿಯ ಮೇಲಾಣೆ!
ಇದು ಚಾಮುಂಡಿಯ ಮೇಲಾಣೆ!
ಇದು ಗೊಮ್ಮಟ ಗುರದೇವಾಣೆ!
ದೀಕ್ಷೆಯ ತೊಡು ಇಂದೇ . . . .

೩

ಕಾಣಲಿ ಕನ್ನಡ ವ್ಯೋಮಾಕ್ಷಿ!
ನಿಲ್ಲಲಿ ರವಿ ಚಂದ್ರರ ಸಾಕ್ಷಿ!
ಕೇಳಲಿ ಕನ್ನಡ ಪಶು ಪಕ್ಷಿ!
ಸರ್ವ ದೇವರೂ ಶ್ರೀ ಸಾಕ್ಷಿ!
ದೀಕ್ಷೆಯ ತೊಡು ಇಂದೇ . . . .

೪

ಇದು ನಿನ್ನಯ ಸತಿಯಾಣೆ!
ಇದು ನಿನ್ನಯ ಪತಿಯಾಣೆ!
ಮಕ್ಕಳ ಮೇಲಾಣೆ!
ಅಕ್ಕರೆ ಮೇಲಾಣೆ!
ಗುರುದೇವರ ಆಣೆ!
ನನ್ನಾಣೆ!
ನಿನ್ನಾಣೆ!
ಕನ್ನಡ ಜನರ ಮೇಲಾಣೆ!
ಕನ್ನಡ ನಾಡೊಂದಾಗೆ ಮಾಣೆ!
ತೊಡು ದೀಕ್ಷೆಯ! ಇದು ರಕ್ಷೆಯ!
ಕಂಕಣ ಕಟ್ಟಿಂದೇ
ಇನ್ನೆಂದೂ ತಾನೊಂದು!
ಕನ್ನಡ ನಾಡೊಂದೇ!

೧-೧೧-೧೯೪೯

# ಅಳುಕುದೀ ಕನ್ನಡಂ!

ಪಂಪರನ್ನರ್ ಕುಮಾರವ್ಯಾಸ ಲಕ್ಷ್ಮೀಶ
ಹರಿಹರಾದಿಗಳುಸಿರ್ ನಮ್ಮೊಳಿರ್ಪನ್ನೆಗಂ
ಅಳುಕದೀ ಕನ್ನಡಂ, ಅಳಿಯದೀ ಕನ್ನಡಂ,
ಉಳಿವುದೀ ಕನ್ನಡಂ! ಮೊನ್ನೆ ಕಣ್ ಬಿಟ್ಟುದೀ
ಪಸುಳೆ ವಿದ್ಯಾನಿಲಯವಾ ಮುತ್ತ ನುಡಿತಾಯ್ಗೆ
ಮೊಲೆವಾಲನಿತ್ತೊಲಿದು ಸಹಿದಪುದೆಂಬಾಸೆ
ನಗೆಗೀಡು, ನಾಣ್ಗೇಡು, ಬೆಳ್ತನಂ! ತಾಯಿಂದೆ
ಪಸುಳೆವಾಳ್; ತಾಯಿರ್ದೆಯೆ ಸಿಸುಗೆ ಕೂಳ್! ಪೆತ್ತಳಂ
ಪಳಿದುಳಿವುದೇನರ್ಭಕಂ ಪೇಳ್? ಪ್ರಭೇದವೇನ್;
ಗೊತ್ತೆ, ಪಸುಳೆಗೆ ಮತ್ತೆ ಪೇನ್ಗೆ? ನೆತ್ತರುಣೆ ಪೇನ್;
ಪಾಲುಣಲ್ ಪಸುಳೆ, ಕೊಂದು ಸಾವುದು ಕೊನೆಗೆ ತಾನ್
ಪೇನ್; ಬಳ್ದು ಬರ್ದುಕಿಪುದು ತನ್ನಬ್ಬೆಯಂ ಪಸುಳೆ!
ನೆತ್ತರುಣಿ ಪೇನಾಗದೆಯೆ ಪಸುಳೆ ತಾನಾಗಲೀ
ಕನ್ನಡಮ್ಮನ ಎರ್ದೆಯ ಅಮೃತ ಜೀವನವೀಂಟಿ,
ಮರಳಿ ಜೀವನಾಮೃತವನೀವ ವಿದ್ಯಾಲಯಂ!

೨೩-೦೨-೧೯೪೨

# ಶ್ರೀ ಗೋಮಟ ಮಹಾಮಸ್ತಕಾಭಿಷೇಕ ಪ್ರಗಥಂ*

೧

ಓ  ಕರೆಯುತಿದೆ ನಿನ್ನನೀ ನಮ್ಮ ತಪ್ತ ಭೂಮಿ;
ಓ ಏಳು, ಶ್ರಿ ಗೋಮಟಸ್ವಾಮಿ!
ಏಳು, ಓ ಏಳು, ಕಡೆದು ಜಡತಾ ಅಚೆನ್ನಿದ್ರೆಯಮ್;
ಏಳು, ಓ ಏಳು, ಒಡೆದು ಶತಶತಮಾನ ಮೌನದ ಶಿಲಾಮುದ್ರೆಯಂ!
ಕರುಣೆಯಿಂದೆಮಗಾಗಿ ಏಳಯ್ಯ ನಿರ್ವಾಣ ಸುಪ್ತಿಯಿಂ,
ನಿನ್ನೊಂದು ಪರಿಪೂರ್ಣತಾ ದಿವ್ಯ ತೃಪ್ತಿಯಿಂ!

ನಮ್ಮ ಹೃದಯದ ಬೃಹಚ್ಚೇತನದ ಮೂರ್ತಿಯಾಗೇಳು ಬಾ;
ಜನ್ಮ ಜನ್ಮಾಂತರದ ಸಂಸ್ಕಾರ  ಸರ್ವಸ್ವ ಸ್ಪರ್ಶಮಣಿಯಾಗೇಳು ಬಾ!
ಹಿಂದಣಾಲಸ್ಯದ ತಮಿಸ್ರಕ್ಕೆ ರವಿದೇವನಾಗಿ ಓ ಮೂಡಿ ಬಾ;
ಮುಂದಣ ಅಭೀಪ್ಸೆಯಾ ಕೈರವಕೆ ಕುಮುದೇಂದುವೋಲುದಿಸಿ ಬಾ!
ಅನುಗ್ರಹಿಸು ಬಾ;
ಉದ್ಧರಿಸು ಬಾ;
ನಿನ್ನ ಜೀರ್ಣೋದ್ಧಾರವೆಮ್ಮ  ಜೀರ್ಣೋದ್ಧಾರವಾಗೆ ಆಶೀರ್ವದಿಸು ಬಾ!

೧

ನಿನ್ನ ಜೀರ್ಣೋದ್ಧಾರಮಂ?
ನಗದಿರು, ಮಹಾಗುರುವೆ; ನಮ್ಮದಿದು ಮರ್ತ್ಯಾವಿವೇಕಂ!
ನಿತ್ಯನೂತನನಪ್ಪ ನೀಂ ಜೀರ್ಣನೆಂತಪ್ಪೆಯಯ್?
ಸರ್ವ ಪರಿಪೂರ್ಣನಿಗೆ ನಿನಗೆ ಉದ್ಧಾರವೆಂದರರ್ಥವೇನಯ್?
ಅಲ್ತಲ್ತು;
ನಿನ್ನಿ ರ್ಣೋದ್ಧಾರಮಲ್ತು:
ಹಾಳಾದುದೆಮ್ಮ ಬಾಳಿಂದು ತಾಂ ಮರಳಿ ಪಡೆಯುತಿದೆ ತನ್ನುದ್ಧಾರಮಂ!
ಕೊಳೆ ತಳ್ತುದೆಮ್ಮ ಬಾಳ್ಗಿಂದಾಗುತಿದೆ ಮೀಹದೊಲ್ ಮಸ್ತಕಾಭಿಷೇಕಂ:
ಜ್ಞಾನ ಮೇಣ್ ಭಕ್ತಿ ಮೇಣ್ ವೈರಾಗ್ಯ ಸಂಕೇತದಾ
ಅಮೃತ ಘೃತ ದಧ್ಯದಿ ಪುಣ್ಯಾಭಿಷೇಕಂ!

೨

ಕನ್ನಡದಾದಿಯ ಕಬ್ಬಿಗನಾ ಪಂಪಂ
ತನ್ನಾದಿಪುರಾಣದೊಳೊರೆದನು ನಿನ್ನಧ್ಯಾತ್ಮದ ಪೆಂಪಂ,
ಧೈರ್ಯದ ಔದಾರ್ಯದ ಮೈತ್ರಿಯ ಮೇಣ್ ತ್ಯಾಗದ ಗುಣ್ಪಂ.
ಅದನಾಲಿಸದಾ ಕವಿಕಲಿ ಚಾವುಂಡೇಶಂ
ಆ ಭವ್ಯತೆಗೋರ್ ಪ್ರತಿಮೆಯನಾಶಿಸಿ ಪುಡುಕುತ್ತಿರೆ,
ಅನುಭವ ಭೂಮತೆಗಾಕಾರಮ ಕೋರುತ್ತಿರೆಯಿರೆ
ಕಳದುಜ್ಜುಗದಿಂ ಸಂಜೆಯ ಪಾಳೆಯಕೂರ್ ದಿನಮೈತರುತಿರೆ,
ಕಂಡನ್ ಕಲ್ವೆಟ್ಟಿನ ಕೋಡಂ.
ಬಯ್ಗಿನ ಬಾನ್ಗಿದಿರೆದ್ದುದು ಆ ಶ್ರವಣನ ಗಿರಿಜೂಡಂ,
ಭೀಮಂ, ರುಂದ್ರಂ, ಆಕಾಶೋನ್ನತ ಗೂಢಂ!

ನಿಂದನ್ ನಟ್ಟಾ ಎಡೆಯೊಳೆ ರಸಯೋಗಪ್ರತಿಭಾರೂಢಂ:
ಕಣಡನ್; ಕಣಡನ್; ಕಣಡನ್; ಕಣಡನ್;
ಕೊರೆಯುವವೋಲ್ ಕೊರೆಯುವವೋಲ್ ನೋಡಿದನಾ ಕಲ್ ಗುಂಡನ್.
ಕಾಣ್ಕೆಯೆ ಕಂಡರಿಸಿದವೋಲ್ ಮೂಡಿದನಾ ಗೊಮಟೇಶಂ,
ತುಂಬಿದ ಶ್ರೀಗಾತ್ರಕೆ ಕುನಿಯಿತೊ ಎನೆ ದಿಗ್‌ದೇಶಂ,
ಸಾರ್ಥಕಮಾಗಲ್ ಚಾವುಂಡೇಶ್ವರ ಭೂಮಾವೇಶಂ!
ಆ ಕಂಡುದನೆಯೆ ಕಂಡರಿಸಿದನೈಸಲೆ ಶಿಲ್ಪಿ,
ಕನ್ನಡನಾಡಿಗೆ ಕಣ್ಣಾಗಲ್ ಪೆರ್ಮೆಯ ಪೆರ್ಬಂಡೆಯ ಕಲ್ ಕಲ್ಪಿ!

೪

ದಿಗ್ವಿಜಯಿಯಾದೊಡಂ ವಿಜಿಗೇಷುವೃತ್ತಿಯಾ
ಭರತ ಚಕ್ರೇಶ್ವರಂ ನಿನ್ನಗ್ರಜಂ
ಅಂದು 'ಆ ವೃಷಭಗಿರಿ ಮೇಖಳಾಭಿತ್ತಿಯೊಳ್
ಆತ್ಮೀಯ ವಿಶ್ವ ವಿಶ್ವಂಭರಾ ಮಿಜಯಪ್ರಶಸ್ತಿಯಂ'
ಕೆತ್ತಿಸಲ್ ಪೋಗಿ ನೋಡಿದೊಡಲ್ಲಿ ತನಗೆ ತಾವಿಲ್ಲದಂತೆ
ಪೂರ್ವ ಚಕ್ರೇಶ್ವರ ಪ್ರಶಸ್ತಿಗಳ್ ತುಂಬಿರ್ದುದಂ ಕಂಡು
ಲೋಕಮಂ ಗೆಲ್ದವಂ ಕೀರ್ತಿಶನಿವಶನಾಗಿ
ಹಮ್ಮಿಗಡಿಯಾಳಾಗಿ ಬಿದಿಯ ನಗೆಗೀಡಾಗುವೋಲ್
ದಂಡರತ್ನದಿ ಸೀಂಟಿ ಆ ಪ್ರಶಸ್ತಿಯೊಳೊಂದನಳಿಸಿ
ಕಂಡರಣೆಗೈಸಿದನ್ ತನ್ನೀ ಪ್ರಶಸ್ತಿಯಂ,
ಶಾಶ್ವತವನರಿಯದೀ ನಶ್ವರ ಪ್ರಶಸ್ತಿಯಂ:

"ಸ್ವಸ್ತಿ ಸಮಸ್ತನರೇಶ್ವರ
ಮಸ್ತಕವಿನ್ಯಸ್ತಶಾಸನಂ ಸಕಲ ಜಗ
ದ್ವಸ್ತಾರಿಕತಯಶನನ್ವಯ
ವಿಸ್ತಾರಕನಾದಿದೇವನಗ್ರತನೂಜಂ."

"ಭುವನವಿಶೇಷಕನಿಕ್ಷ್ವಾ
ಕುವಂಶಗಗನೇಂದು ಚಕ್ರರತ್ನಾಧೀಶಂ
ನವನಿಧಿವಲ್ಲಭನಾನತ
ದಿವಿಜಗಣಂ ನೆಗಳ್ದ ನಾಭಿರಾಜನ ಮೊಮ್ಮಂ."

"ಅವನ ದಿಗ್ವಿಜಯದೊಳೈ
ರಾವತಗಜನಿಭಗಜಂಗಳಿಂ ಭುವನತಳಂ
ತೀವಿದುದಾವನ ಸೈನ್ಯದೊ
ಳಾವರಿಸಿದ ಧೂಳಿ ಪೂಳ್ದುದಂಭೋನಿಧಿಯಂ:"

"ವೇಳಾವನಂಗಳುಂ ಕು
ತ್ಕೀಳಂಗಳುಮಾವ ನೃಪನ ಪಡೆ ನಡೆವೆಡೆ ನಿ
ರ್ಮೂಳಂಗಳಾದುವಾವನ
ತೋಳಿಂ ನಿಮಿರ್ದತ್ತು ಜಳಧಿವರಮವನಿತಳಂ:"

"ದೇವಾಂಗನೆಯರ್ ಪಾಡುವ
ರಾವನ ಜಸಮಂ ಕುಳಾಚಳಾವಳಿಯೊಳ್ ಶೌ
ರ್ಯಾವಷ್ಟಂಭದಿನಾಳ್ದವ
ನವಂ ಷಟ್ಖಂಡಮಂಡಿತಕ್ಷಿತಿತಳಮಂ"

"ಆತಂ ಭರತೇಶ್ವರನಿಂ
ತೀ ತರದಿಂ ನಿಗಳ್ದ ತನ್ನ ಕೀರ್ತಿಯನೀ ವಿ
ಖ್ಯಾತ ವೃಷಬಾದ್ರಿಯೊಳ್ ಸುರ
ಗೀತಯಶಂ ನಿಳಿಸಿದಂ ನೆಲಂ ನಿಲ್ವಿನೆಗಂ."

೫

'ನಿಲ್ವಿನೆಗಂ ನೆಲಂ!'
ಅಧಿಕಾರ ಮೊಹಕ್ಕೆ ದರ್ಪಕ್ಕೆ ಏಂ ಪೈತ್ಯಮೇಂ ಚಲಂ?
ಅಂದಿನಾ ಶನಿಯೆ ತಾನಿಂದಿಗೂ ಕದಡುತಿಹುದೆಮ್ಮ ಬಾಳಂ.
ಆ ರೋಷ ಆ ದ್ವೇಷ ಆ ಅಹಂಕರದಾವೇಶಗಳೆ
ಪಿಡಿದಿರ್ಪವಲ್ತೆ ಪೀಳಿಂದಿಗೂ ರಾಜ್ಯಸೂತ್ರಂಗಳಂ?
ವಹಿಸಿರ್ಪವಲ್ತೆ ರಣನಾಟಕಕೆ ಶಕುನಪಾತ್ರಂಗಳಂ?
ಹೇ ಪೂಜ್ಯ ಬಾಹುಬಲಿ,
ಹೇ ಅಹಿಂಸಾ ಪರಮ ಧರ್ಮ ಕಲಿ,
ಆ ರೋಷ ಆ ದ್ವೇಷ ಆ ಅಹಂಕಾರಂಗಳಂ,
ಆ ಕೀರ್ತಿಲೋಭ ಮೇಣ್ ಆ ರಾಜ್ಯದಾಹಂಗಳಂ,
ನಿನ್ನಣ್ಣ ಭರತನೋಳ್ ಮೂರ್ತಿವೆತ್ತಿದಿರಾದ

ಆ ತಿಮಿರ ಅಸುರೀ ದೂತರ್ಕಳಂ
ನೀನಂದು ಧವಳಸತ್ತ್ವದಿ ಗೆಲ್ದೆಯಲ್ತೆ,
ಭರತಂವರಸಿ ವಿಶ್ವಮಡಿಗೆರಗುವೋಲ್!
ಭೋಗಶಿಖರದಿಂ ತ್ಯಾಗದಾ ಗೆಲ್ಗಂಬಮಂ ಮೆರೆದೆಯಲ್ತೆ
ಲೋಕಸರ್ವಂ ಮಣಿದು ಬೆರಗಾಗುವೋಲ್!
ಆಲಿಸಯ್, ಗುರುವೆ, ಶಾಂತಿಯ ಕಲ್ಪತರುವೆ,
ನೀನಂದು ನಿನ್ನಗ್ರಜಂಗೊರೆದಾ ವಚೋವೇದಮಂ,
ದಿಟದಿಂ ನಿಲಂ ನಿಲ್ವಿನೆಗಂ ನಿಲುವ ಮೇಣ್ ಮೀರ್ವ
ಶಾಶ್ವತದ ವಿಜಯಪ್ರಶಸ್ತಿಯಂ:
ಸರ್ವಮಾನವ ಮನೋ ವೃಷಭಗಿರಿಭಿತ್ತಿಯೊಳ್
ಚಿರಂ ಮೆರೆವ ವಜ್ರಲಿಪಿ ವಿಜಯ ಪ್ರಶಸ್ತಿಯಂ:

"ನಿನ್ನೀ ಬೆಸಸಿದ ಚಕ್ರಮ
ದೆನ್ನೀ ದೇಹಾದ್ರಿಯಂ ಗೆಲಲ್ ನಿರೆಯದು ನೀ
ಬಿನ್ನನಿದೇಕಿರ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕುಮೆ ವಜ್ರಂ!"

"ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರಿಮಾಟಿಸಿದಂದು ನೆಗಳ್ತೆ ಮಾಸದೇ?"

"ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಳ್ದ ದೋಷಮಂ ತಪದೋಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮೆರವುದೆನ್ನ ದುರ್ವಿಳಸನಮಂ!"

೬

ಸ್ವಸ್ವರೂಪದ ಸಚ್ಚಿದಾನಂದ ಸಾಕ್ಷಾತ್ಕರಣರೂಪ ಮೋಕ್ಷಂ
ಪೂರ್ಣತಾ ಸಿದ್ಧಿಯದೆ ಮನುಜ ಜನ್ಮಕೆ ಪರಮ ಚರಮ ಲಕ್ಷ್ಯಂ;
ಕೈವಲ್ಯದಾ ಸಮ್ಯಕ್ತ್ವದೊಳ್ ನೆಲೆಸಿರ್ಪ ನೀಂ ಜಗದ್ವಂದ್ಯಂ:
ನಿನ್ನ ನಿನಿವುದೇ ನಮಗೆ ಚೇತನೋದ್ಬೋಧನಂ;

ನಿನ್ನ ಪೂಜೆಯೆ ನಮಗೆ ಅಧ್ಯಾತ್ಮ ಸಾಧನಂ;
ಆ ದಿವ್ಯ ನಿಷ್ಕ್ರಿಯಾ ಕ್ರಿಯೆಗನ್ಯ ಕರ್ಮಂಗಳೆಲ್ಲ ಹಿಮಗಿರಿಯಿದಿರ ವಿಮಧ್ಯಂ!
ಹೇ ಸಾಧುಕುಲ ಶಾಶ್ವತ ಸ್ಫೂರ್ತಿ,
ಹೇ ವಿರಾಡ್ ಭವ್ಯ ಗುರುಮೂರ್ತಿ,
ನೆಲೆಸು ನಮ್ಮೆರ್ದೆಗಳಲಿ ನಿನ್ನಾ ತಪೋರೂಪದಿಂ;
ಜ್ಯೋತಿಯೆಡೆಗೆತ್ತು ನಮ್ಮಾತ್ಮಂಗಳಂ ಸ್ವಾರ್ಥತೆಯ ಈ ತಮಃಕೂಪದಿಂ;
ಭೂಮವಾಗಲ್ ನಮ್ಮ ಚೈತನ್ಯಮದನುದ್ಧರಿಸು ಈ ಅಲ್ಪತ್ವದಭಿಶಾಪದಿಂ!
ನಿನ್ನ ಕನ್ನಡ ನಾಡನೊಂದುಗೂಡಿಸಿ ಕಾಯಿ;
ನಿನ್ನ ಕನ್ನಡನುಡಿಯನಾಡಿ ಧನ್ಯವಾಗಲಿ ನಮ್ಮ ಬಾಯಿ;
ಅನ್ಯಭಾಷಾಮೋಹದಾಸ್ಯಕ್ಕೆ ಪಕ್ಕಾಗದಿರಲೆಮ್ಮ ತಾಯಿ!
ನಿನ್ನ ಭಾರತಭೂಮಿ ನಿನ್ನುನ್ನತಿಗೆ ಬೆಳೆದು ನಿಲ್ಗೆ;
ಪೃಥಿವಿಯ ಸುಧಾಕಾಂಕ್ಷೆ ಭಾರತಿಯ ಶಾಂತಿಮಯ ವಕ್ಷದಿಂ ಸಲ್ಗೆ;
ಮರ್ತ್ಯಮಾನಸಕೋಶಕವತರಿಸಿ ನಿತ್ಯಮತಿಮಾಸನಂ ಗೆಲ್ಗೆ;
ಪೂರ್ಣತಾ ಸಿದ್ಧಿಯಿಂದೀ ಧರಿಯನೇಗಳುಂ ಕ್ಷೀರಕೈವಲ್ಯಮಾಳಗಳ್ಗೆ;
ಶ್ರೀ ಮಸ್ತಕಾಭಿಷೇಕದೊಳುದಿಸಿ ನದನದಿಗಳೆಮ್ಮಿಳೆಯ ಸಿರಿಸೊಗಂ ಚಿರಂ ಬಾಳ್ಗೆ!

೯-೯-೧೯೫೧

## ವಿಶ್ವವಿದ್ಯಾನಿಲಯದ ರಜತೋತ್ಸವ

ವ್ಯಕ್ತಿಗಿರ್ಪ್ಪತ್ತೈದು ವರ್ಷಗಳ್ ಪರಿದಾದೊಡಂ
ವಿಶ್ವವಿದ್ಯಾನಿಲಯದಂತಪ್ಪ ಸಂಸ್ಥೆಗದು
ಬರಿಯಲ್ಪಮೈಸೆ! ಅದರಿಂದಮಾಂ ಮುಂದೆ ಆ
ನಿನ್ನ ಸ್ವರ್ಣೋತ್ಸವಕೆ ಮುಡಿಪನಿಟ್ಟಿಹೆನೊಂದು
ಪರಿಣತಶ್ರೇಷ್ಠಪ್ರಗಾಥಮಂ. ಇಂದುಲಿವ
ಈ ಕವನವೊಂದು ಶಾಸ್ತ್ರಕ್ರಿಯಾಕರ್ಮದೋಲ್
ಬರಿ ಸಂಪ್ರದಾಯಮೆಂದರಿವಿದೌ, ಓ ನನ್ನ
ವಿಶ್ವವಿದ್ಯಾಮಾತೆ. ಶಿಶುತನವನುತ್ತರಿಸಿ
ಬಾಲ್ಯ ಕೌಮಾರಗಳ ನಡುವೆ ನಡೆವೀ ನಿನಗೆ
ನಾಂ ಚಿರಕೃತಜ್ಞನೆಂ: ಬುದ್ಧಿಗನ್ನವನಿತ್ತೆ;

ಹೃದಯಕಮೃತವನಿತ್ತೆ: ಮೇಣಂತೆ ಲೌಕಿಕದ
ಜೀವಿತಕ್ಕಶ್ರಯವನಿತ್ತೆ. ನಿನ್ನ ಬೆಳಕಿಗೆ
ಪೊಕ್ಕು,ಕವಿ ಋಷಿ ಕೃತಿಯ ರಸಸುಖವನೀಂಟಿದೆನ್;
ನಾನಮುಖದ ದಿವ್ಯ ವಿಜ್ಞಾನಿಗಳ ಜಗಜ್
ಜಿಜ್ಞಾಸೆಯಿಂ ಗುಹ್ಯಸೃಷ್ಟಿಯ ರಹಸ್ಯಮಂ
ಸವಿದೆನಾಂ, ಬುದ್ಧಿಯ ಕ್ಷುರಸ್ಯ ಧಾರಾ ನಿಶಿತ
ಜಿಹ್ವೆಯಿಂ. ಮೇಣ್, ನರರ ನಡುವಿರ್ದೊಡಂ ದಲ್
ಚಿರಂತನೇಕಾಂಗಿ ನಾಂ, ಪಡೆದೆನೊರ್ವನ ಪುಣ್ಯ
ಸಹವಾಸಮಂ. ದಿವಂಗತನಾದನಾತನುಂ
ಕವಿಯ ಕೃತಿಗಳನೊಲಿದು ಕೇಳ್ವ ಲೋಕಕೆ ಕಿವುಡು
ಬರ್ಪಂತೆ. ಓ ನನ್ನ ವಿಶ್ವವಿದ್ಯಾಜನನಿ,
ಹೇ ದೇವಿ, ಒರೆದಾ ಸಮಸ್ತ ಕೃಪೆಗಳಿಗೆ ನಾಂ
ನಿನಗಿದೊ ಕೃತಜ್ಞನೆಂ. ಮಣಿವೆ ಸಾಷ್ಟಾಂಗದಿಂ
ನಿನ್ನಡಿಗೆ, ಹರಕೆಯಂ ಬೇಡಿ.

ಕೇಳ್, ಅದೊಂಡಂ
ನಿನ್ನ ಕವಿಶಿಶುವ ಪೆರ್ಮೆಯ ನುಡಿಗಳಂ; ಕ್ಷಮಿಸಾ
ಕಿಡಿಗಳಮ್: ದೇವಿ ನೀನೊರ್ವಳಲ್ತೆನ್ನೆರ್ದೆಯ
ಗುಡಿಯ ಗೋಪುರ ಕೃತಿಗೆ ಕಾರಣಲ್. ನಿನಗಿನ್
ಮಿಗಿಲ್ ಇರ್ಪುವಾ ಗಿರಿ ಅರಣ್ಯ ಸಹ್ಯಾದ್ರಿಯುಂ,
ಮತ್ತಮಾ ದಕ್ಷೀಣೇಶ್ವರ ದೇವಮಾನವನ
ತಪಕೆ ಸಿದ್ಧಿಗೆ ಮೆಯ್ಯುವೋಲಿರ್ಪ ಗುರುಮಂದಿರಂ.
ನೀಂ ಬೋಧಿಸಿದ ತತ್ತ್ವಗಳನಲ್ಲಿ ಸಾಧಿಸಿದೆ
ನಾಂ. ಆ ಸ್ವತಂತ್ರತೆಗೆ ನೀನಿನ್ನುಮಾಸೆಯಿಂ
ನೋಂತಿರ್ಪೆಯೌ. ಸಂಕಟದ ಸೊಲ್ಲಿದಂ, ತಾಯೆ,
ಕೇಳ್: ನೀನಸ್ವತಂತ್ರೆ! ನಾಡಿಗಿಲ್ಲದುದೆಂತು
ನಿನಗೆ ದೊರೆಕೊಳ್ವುದೌ, ಜನನಿ? ನಮಗಿಲ್ಲದುದು
ನಿನಗೆಲ್ಲಿ? ನಾಮಲ್ತೆ ನಿನ್ನುಸಿರ್? ಮುಂದೆ ಆ
ನಿನ್ನ ಸ್ವರ್ಣೋತ್ಸವಕ್ಕಾದೊಡಂ ಕವಿಯ ಈ
ಹೆಬ್ಬಯಕೆ ಕೈಗೂಡಿ, ಇಂದಿನ ಬೃಹನ್ನಿಶೆಯ
ನೇಮಿಯಿಂ ಮೂಡಿ ಬಹ ಸ್ವಾತಂತ್ರ್ಯ ಸೂರ್ಯನಾ
ದಿವ್ಯ ಜ್ಯೋತಿಃಸ್ಫೂರ್ತಿಯಿಂದೆನ್ನ ಅಂದಿನಾ
ಪಕ್ವತರ ಮಧುರ ಪರಿಣತ ವಾಣಿ ಉಲಿವವೋಲ್

ಮಹತ್ತರ ಪ್ರಗಾಥಮಂ, ಆ ಸರಸ್ವತಿ, ದೇವಿ,
ಸಿರಿಗನ್ನಡಂ ಗೆಲ್ವವೋಲೆಮಗೆ ದಯೆಗೆಯ್ಗೆ!

೧೦-೭-೧೯೪೧

## ಕವನ ಮಾತ್ರವೆ, ಕೇಳ್, ಶಕ್ತಿಮಂತ್ರ!*

ಅವತರಿಸು ಬಾ ಇಂದೆ ಹಿಂದುವಿನ ಹೃದಯಕ್ಕೆ
ಹಂದೆತನವಮ್ ನೂಂಕಿ,
ಓ ಲಂಕಭಯಂಕರ ಸಮಿರಕುಮಾರ,
ಹೇ ಆಂಜನೇಯ!
ನಿನ್ನಾ ಸಮುದ್ರಮಂ ಲಂಘಿಸಿದ ಶಕ್ತಿ,
ಪರ್ವತವ ಕಿತ್ತೆತ್ತಿ ಪೊತ್ತು ತಂದಾ ಶಕ್ತಿ,
ದಂಭದರ್ಪೋನ್ಮತ್ತ ರಾಕ್ಷಸರ ಮರ್ದಿಸಿದ ಶಕ್ತಿ,
ಸೀತಾಪತಿವ್ರತಾ ಮಾನವಂ ಸಂರಕ್ಷಿಸಿದ ಶಕ್ತಿ,
ದುಷ್ಟದಾನವ ಲಂಕೆಯಂ ಧಗದ್ದಹಿಸಿದಾ ಶಕ್ತಿ,
ಬ್ರಹ್ಮಚರ್ಯದ ಶಕ್ತಿ,
ಯೋಗಸಿದ್ಧಿಯ ಶಕ್ತಿ,
ರಾಮಭಕ್ತಿಯ ತಪಶ್ಯಕ್ತಿ,
ಉದ್ಭವಿಸಲಿಂದು ಹಿಂದುವಿನ ಹೃದಯದಲಿ
ಆ ನಿನ್ನ ರುಂದ್ರಶಕ್ತಿ,
ದುಷ್ಟದಾನವ ದಮನ ದಲನ ದೀಕ್ಷಾಶಕ್ತಿ,
ಓ ಲಂಕಾಭಯಂಕರ ಸಮಿರಕುಮಾರ,
ಹೇ ಆಂಜನೇಯ!

ಉದ್ಭವಿಸು ಬಾ ಇಂದೆ ಹಿಂದುವಿನ ಭುಜ ಭುಜುಗ ಫಣೆಗೆ
ಹಂದೆತನವಳಿವಂತೆ,
ಓ ಕೌರವ ಭಯಂಕರ ಸಮಿರಕುಮಾರ,
ಹೇ ಭೀಮಸೇನ!
ನಿನ್ನ ದನಿಗೇಳ್ದ ದುರ್ಯೋಧನಂ
ಕೊಳದಿಂದದೆಂತುಣ್ಮಿ ಚಿಮ್ಮಿದನೊ ತಾನ್

ಅಂತೆವೋಲ್ ನಮ್ಮೀ ಹೃದಯ ವಲ್ಮೀಕದಿಂ
ಚಿಮ್ಮಿ ಮಲೆಯಲಿ ನಿನ್ನುಗ್ರ ಗದಾ ಲಯೋರಗಂ
ಪಾಪ ವಿಧ್ವಂಸನಕೆ ಪೂಂಣ್ದ ಪುಣ್ಯ ಪ್ರಲಯ ರುದ್ರನೋಲ್!
ಕಲಿಸೆನಗೆ ನಿನ್ನಾ ಘೋರ ಛಲಮಂ
ದುರುಳ ದುಶ್ಯಾಸನನ ಕರುಳ ಕಿತ್ತೆಳೆದು ನೆತ್ತರ್ ಕುಡಿವವೋಲ್!
ನೀಡೆಮಗೆ ನಿನ್ನ ಭೈರವ ರುಂದ್ರ ಬಲಮಂ
ಬಕ ಹಿಡಿಂಬರ ಕೊರಳ್ ಮುರಿವವೋಲ್,
ಭಗದತ್ತನಾನೆಯಂ ಪತ್ತಿ ಕೊಂದೊತ್ತಿ ಕುರಿದರಿಮಾಳ್ಪವೋಲ್
ಕಲಿಸೆಮಗೆ ನಿನ್ನಾ ಪ್ರತಿಜ್ಞಾ ಪ್ರತಾಪಮಂ
ದ್ರೌಪದಿಯ ಮಾನಕ್ಕೆ ದುರ್ಯ್ಯೋಧನೋರುಸ್ಥಲವನುಡಿವವೋಲ್,
ದಂಭದರ್ಪದ ಕಿರೀಟವನೊದೆವವೋಲ್,
ಧೈರ್ಯ ದಿವ್ಯಾಗ್ನಿಯಿಂ ಬೀರುಹೃದಯದ ತಮಂ ಕಿಡುವವೋಲ್,
ಪೆಣ್ ಮುಡಿಗೆ ಕೆನ್ನೀರಿನೋಕುಳಿಯ ಹೂಮುಡಿಸುವೋಲ್,
ದಿವ್ಯ ಧರ್ಮಧ್ವಜಂ ತಾಂ ದಿಗ್ವಿಜಯ ಗೌರವಕೆ
ದಿಗ್ದಂತಿಗಳ್ ಬಿಚ್ಚಿ ಕಣ್ಣೆತ್ತಿ ನೋಡುತಿರೆ
ಗಗನೊತ್ತಮಾಂಗಮಂ ಗುಡಿಸುವೋಲ್!
ಉದ್ಭವಿಸಲಿಂದು ಹಿಂದುವಿನ ಹೃದಯದಲಿ
ನಿನ್ನತುಲ ಶೌರ್ಯ ಹೈಮಚಲಂ
ದುಷ್ಟದಾನವ ದಮನ ದಲನ ದೀಕ್ಷಾ ಛಲಂ,
ಓ ಕೌರವ ಭಯಂಕರ ಸಮಿರಕುಮಾರ,
ಹೇ ಭೀಮಸೇನ!

೧೧-೧೧-೪೬

## ಧಿಕ್ ಧಿಕ್ ಧಿಕ್ !

ನೇಸರುದಯಿಸುವ ನಾಡಿಂದಲೈತಂದು ಅದೊ
ಬಂಗಾಳ ಕೊಲ್ಲಿಯಲಿ ಬಂದು ನಂತಿದೆ ಭೀತಿ:
ಭರತ ಭೂಮಿಯ ಮಾಲೆ ಹಾದುಹೋಗಿದೆ ಅದರ
ಭೀಕರ ಬೃಹಚ್ಛಾಯೆ! ಜನಮನದೊಳೇನೊ ಭಯ;

ರೂಪಕೆಳಸುವ ಪ್ರೇತವತ್ ಶಂಕೆ: ಮನೆಯೊಳಗೆ
ಪಿಸು ಮಾತು. ದೀಪಗಳ್ ಕೂಡ ಮುಸುಗಿನ ಕೆಳಗೆ
ತಲೆಮರಸಿಕೊಳ್ಳುತಿವೆ. ಗಗನಕೇರುವ ಮನುಜ,
ಇಲಿಗಳೊಲ್, ಕುಣಿ ತೋಡುತಿಹನು ಬಿಲದೊಳಗಡಗಿ
ಬದುಕಲ್ಕೆ, ಲಾರಿಲಾರಿಯಲಿ ಸೆಟ್ಟರ ಮನೆಯ
ಹೊನ್ ಹದಿಗಿ, ಹುದುಗಿಕೊಳ್ಳಲು ಹಳ್ಳಿಗೋಡುತಿದೆ.
ಗಾಡಿಯಲಿ ಚಿಂದಿ ಹರಕಲು ಮುರುಕುಗಳನೆಲ್ಲ
ಹೇರಿ, 'ಎಲ್ಲಾದರೂ ಸರಿಯೆ, ಏನಾದರೂ
ಸರಿಯೆ, ಇಲ್ಲಿರವು ಬೇಡೆಂ' ದು ದೌಡೋಡುತಿದೆ
ಗಾರುಗೊಂಡಿಹ ಬಡತನಂ. ರೈಲು ರೈಲುಗಳ್
ಹೊರಲಾರದೆಯೆ ಹೊತ್ತು ಹೆದರೆದೆಯ ಹೊರೆಗಳಂ
ಧಾವಿಸುತ್ತೇದುತಿವೆ ನಿಲ್ದಾಣದಿಂ. 'ಧೈರ್ಯ!
ಧೈರ್ಯ!' ಎಂಬರ ಕೊರಳೆ ಗದ್ಗದಿಸುತಿದೆ; ಏಕೊ
ಏನೊ, ಕಂಪಿಸಿ ತೊದಲುತಿದೆ! ನಾಡ್ನೀ ಸ್ಥಿತಿಗೆ
ತಂದಿಟ್ಟವರಿಗಾವ ಕರ್ಮ ಕಾಯುತ್ತಿದೆಯೊ
ದೇವರೊಬ್ಬನೆ ಬಲ್ಲ ರಾಮಾಯಣದ ನಾಡು;
ಮಾಭಾರತದ ನಾಡು; ವೀರಪೂಜೆಯ ನಾಡು;
ಈ ನಾಡನೀ ನಾಚಿಗೆಯ ಗತಿಗೆ ನೂಕಿದಾ
ರಾಜತಂತ್ರದ ಲೋಭನೈಚ್ಯಕೆ - ಧಿಕ್! ಧಿಕ್! ಧಿಕ್!*

ಬೆಂಗಳೂರು, ೧೩-೪-೧೯೪೨

---

* ಕ್ರಿಪ್ಸ್ ಸಂಧಾನ ಮುರಿದು ಬಿದ್ದ ಸಮಯ.

## ಗತಿಸಿದ ರಾಜಕೀಯ ರಾವಣನೊಬ್ಬನಿಗೆ

ಅಂತು ಕೊನೆಗೂ ತೊಲಗಿದೆಯ ಪುಣ್ಯಭೂಮಿಯಿಂ.
ಪಾಪಾತ್ಮ! ಅಲ್ಲಾದೊಡಂ ಮೈತ್ರಿಯಂ ಕಲ್ತು
ಬರ್ದುಕು, ಕರ್ಮಕೆ ತಕ್ಕ ಶಿಕ್ಷೆಯ ಅನಂತರಂ!
ಏನ್ ಕಾಯುತಿದೆಯೊ ನಿನಗಲ್ಲಿ, ಹೇ ದುರಾತ್ಮಾ?

ನೆನೆದರೆಯೆ ಮೈನಡುಗಿತಿದೆ ನನಗೆ: ನರಕಂ
ತನ್ನೆಲ್ಲ ಪಾಪ ಶಿಕ್ಷಾ ಶುನಕ ಕೋಟಿಯಂ
ಕಳುಹದೇನಿರ್ಪುದೆ ಕೊರಳ್ ಬಿಚ್ಚಿ, ಪೇಳ್, ನಿನ್ನ್
ಗೆಯ್ದ ಪಾಪಂಗಳಂ ಬೇರ್ಪಡಿಸೆ ನಿನ್ನಾತ್ಮದಿಂ?
ಕೋಟಿ ದುಃಖಂಗಳಂ ಪೆತ್ತು ಭಾರತಕಿತ್ತ
ಶಠದನುಜ, ನಿನ್ನ ದುಃಷ್ಕೃತ ಫಲಂಗಳನಲ್ಲಿ
ಕಾಣ್: ಬಂಗಾಳ ಪಂಜಾಬುಗಳ ಕೊಲೆಗಳಿಂ
ಸಂಭವಿಸಿದನ್ಯಾಯಮಂ, ಶೋಕಂಮಂ, ಶಾಪಮಂ
ಕುದಿವೆದೆಯ ಕಣ್ಣೀರ ತಾಪಂಗಳಂ ಕಾಣ್,
ಕಾಣ್, ಕಾಣ್! ಸತ್ತ ಮೇಲಾದೊಡಂ ಕಣ್ ಬಂದು
ಕಾಣ್! -

ಅಲ್ಲಾದೊಡಂ ಮರೆವೊಗು ಮಹಾತ್ಮನಂ,
ಸರ್ವಮಂ ಕ್ಷಮಿಸಿ, ರಕ್ಷಿಸಬಲ್ಲ ದಿವ್ಯಾತ್ಮನಂ:
ವೈರಿ ದಶಶಿರನಾತ್ಮಮಂ ಕೊನೆಗೆ ತನ್ನೊಳಗೆ
ಕರೆದುಕೊಂಡವನ ನಾಮವನುಚ್ಚರಿಸುತುರುಳಿ
ಒಡಲನುಳಿದಾ ಸತ್ಯ ಆಹಿಂಸಾ ದಯಾತ್ಮನಂ!

ಸತ್ತಂಗೆ ಹಗೆ ಹೊಲ್ಲ. ನಿಂದಾ ಕಳಂಕದಿಂ
ಹೊಲೆಯಾಗಲೊಲ್ಲದೀ ಕವಿಜಿಹ್ವೆ. ರಾವಣಗೆ
ದುರ್ಯೋಧನಂಗೆ ಕರುಣದಿ ಮರುಗುವೀ ಮನಂ
ನಿನಗೆ ಕಲ್ಲಾಗದಯ್. ನಿನ್ನ ಕರ್ಮಕೆ ಬಯ್ದೆ,
ನಿನಗಲ್ಲ. ಅನ್ಯಲೋಕಂಗಳಲ್ಲದೊಡಂ
ನಿನ್ನಾತ್ಮಕೈತರ್ಕೆ, ಪಾಪವಕ್ರತೆ ಮಾಣ್ದು,
ಋಜುತೆ! ನಿನಗೊಳ್ಳಿತಂಗೆಯ್ಯಲಿ ಜಗನ್ಮಾತೆ!

೧೨-೯-೧೯೪೮

# ಪತ್ರಿಕಾ ಗವಾಕ್ಷಿ*

ಸುದ್ದಿಯನೋದುತ್ತಿರೆ ಬಳಿಗೈತಂದಳು ಕಿರಿಮಗಳು;
ಮುದ್ದಿನ ಮೊಗದರಳಿಗೆ ಮುತ್ತಿದ್ದುವು ಕರಿದುಂಬಿಯ ಕುರುಳು.
ತೆಕ್ಕನುಕ್ಕಿ ಜಾಗ್ರತವಾದುದು ನನ್ನೊಳಗಾ
ಪಶ್ಚಿಮ ಪಂಜಾಬಿನ ಹಿಂದೂ ತಂದೆಯ ಕರುಳು:
ದುಃಕ್ಕಕೆ ಸೆರೆಬಿಗಿದುದು ಕೊರಳು.
ಮಂಜಾದುವು ಕಣ್:
ಪತ್ರಿಕೆ, ಹಿಂದೂ; ಪಟ್ಟಣ, ಮೈಸೂರು.
ತೊಯ್ದುದುಪಶ್ಚಿಮ ಪಂಜಾಬಿನ ಮಣ್! -
ಆಃ ದುರ್ಬಲ ಬಲಿ ಕಬ್ಬಿಗನೀ ಕಣ್ಣೀರು! -
ಏನಿದು? ಕಾಣ್:
ಜನ, ಜನ, ಜನ, ಜನ , ಜನ!
ಯೋಜನ, ಯೋಜನ, ಯೋಜನ,
ಜನಜಂಗುಳಿ ಸರಪಣಿವರಿದಿದೆ ಸರ್ಪಣರಸ್ತೆಯಲಿ!
ಹುಟ್ಟಿದ ನೆಲ ಕೆಟ್ಟು,
ನೆಲೆಗೆಟ್ಟು. . . .
ಹೊಲಮನೆ ಐಸಿರಿ ಎಲ್ಲವ ಬಿಟ್ಟು,
ಕಾಲ್ಗೆಟ್ಟು. . . .
ಕಣ್ಗೆಟ್ಟು. . . .
ಮತವೈರದ ಸಿಟ್ಟುರಿಯಲಿ ಸುಟ್ಟು,
ಪಾಕಿಸ್ತಾನದ ಪೆಟ್ಟಿಗೆ ಮರವಟ್ಟೂ
ಹಿಂದೂಸ್ತಾನದ ದಿಗಂತರಕ್ಷೆಗೆ ಬಾಯ್ಬಿಟ್ಟು
ಜನವಾಹಿನಿ ತರ್ಪಣವರಿದಿದೆ ಸರ್ಪಣರಸ್ತೆಯಲಿ,
ಅಸ್ತವ್ಯಸ್ತಂ ಪಥ ಸಂತ್ರಸ್ತಂ
ಗೂಳೆಯದೆಗೆದಿದೆ ದುರವಸ್ಥೆಯಲಿ!
ಜೋಲುತ ನಡೆಯುವ ತಾಯಿಯ ಮಡಿಲಲಿ
ಅದೊ, ಆಲಿಸು, ಒರಲುತ್ತಿದೆ ಕೂಸು;
ಅವಳೆಡೆ ಕುಂಟುವ ಕಂದನ ಕಾಲಿನ
ನೆತ್ತರಿಗಿದೊ ನಾನೋದುವ ಪತ್ರಿಕೆ
ಕೆಮ್ಮಾಸು!
ಕೈವಿಡಿದೊಲಿದವನೆಲ್ಲಿ, ಓ ತಾಯಿ!-

ಅಯ್ಯೊ ಹೇಳಲು ಬರುವುದೆ ಬಾಯಿ?
ನಾಲಗೆ ಸತ್ತಿದೆ; ಅದೇ ಲೇಸು!
ಪಡೆದಯ್ಯನದೆಲ್ಲಿ, ಓ ಕಂದ?
ನೀನಾದರು ಹೇಳ್, ಏನಾದ?
'ಗೋಳಿಡುವಕ್ಕನ ಪಾಪಿಗಳುಯ್ದುರು,
ಅವಳನು ಬಿಡಿಸಲು ಹೋದ. . . .'
ಸರಿ, ಬಿಡು, ಮುಂದಾದುದು ಗೊತ್ತು:
ತಲೆ ನೆಲಕುರುಳಿತ್ತು;
ನೆತ್ತರು ಮಣ್ಣನ್ ತೊಯ್ದುತ್ತು;
ಪಾಕಿಸ್ತಾನಂ ಫಲವತ್ತಾಯ್ತು!
ನಿನಗೇನೊರೆಯಲಿ ಹೇಳ್, ತಂಗಿ?
ಸೀತೆಯನುಯ್ದಾ ರಾಕ್ಷಸನಂ ಭಂಗಿಸಿದಾತನೆ ಆಪತ್ಸಂಗಿ!
ಬಂಕಿಯ ಮಗಳಾ ದ್ರೌಪದಿ ನಿನಗಾಲಿ ರಕ್ಷೆ:
ದುಶ್ಯಾಸನನಿಗೆ ತಪ್ಪಿತೆ ಶಿಕ್ಷೆ?
ಧೈರ್ಯದ್ರುಮ ಭೀಮನ ಕರೆ; ಅವನಿನ್ನೂ ಸತ್ತಿಲ್ಲ!
ಅವನಾ ರೋಷದ ಅಗ್ನಿ ಸಮುದ್ರಂ ಇನ್ನೂ ಬತ್ತಿಲ್ಲ!
ಅಣ್ಣನ ಕಣ್ ಸನ್ನೆಯ ಸಾತ್ತ್ವಿಕವಿನ್ನೂ ಉರಿಹೊತ್ತಿಲ್ಲ!
ನೀ ದೃಢಳಾಗಿರೆ ಮೃಡನಡಹಾಯ್ದುರು ಕೇಳ್, ತಂಗಿ,
ದುಶ್ಯಾಸನನಿಗೆ ವಧೆ ತಪ್ಪಿಲ್ಲ:
ನಿನ್ನ ರಕ್ಷೆಗದೊ ಪಣತೊಟ್ಟಿಹನಾ
ಭೀಮನ ಪೂಣ್ಕೆಗೆ ಬೆಪ್ಪಿಲ್ಲ!
ತೊಯ್ದಾ ಪತ್ರಿಕೆಯನು ಕೈಬಿಟ್ಟೆ;
ಮಗಳನು ಮುದ್ದಿಸಿ ಮುತ್ತಿಟ್ಟೆ;
ಕೊನೆಗೆ...
ಕ್ಷೇಮಂಕರಿ ಶಕ್ತಿಯ ಪ್ರಾರ್ಥನೆಗೆ
ಭಾವದ ಹೃದ್ಭಾರದಿ ತೊನೆಯುತ ನಡೆದೆನು ನಾ ದೇವರ ಮನೆಗೆ!

# ಇದು ವಿಶ್ವಘಟನೆ*

ಇಂದು ಈ ಲೋಕದಲ್ಲಿ, ನಡೆವ ಘಟನೆಗಳೆಲ್ಲ
ಅಜಗಳೈಸಲೆ ಈ ಗಜೇಂದ್ರ ಘಟನೆಯ ಮುಂದೆ!
ಮುಂದೆ, ಈ ಯುದ್ಧವೂ ವಿಸ್ಮೃತಿಯೊಳದ್ದಿದಾ
ಶತಮಾನ ಶತಗಳಾಚೆಯ ಕಣ್ಗೆ ತಳತಳಿಸಿ
ಪೊಳೆವುದೀ ಪ್ರಾಯೋಪವೇಶದ ಪವಿತ್ರ ದೃಶ್ಯಂ.
ರಾಮದರ್ಭಾಸ್ತರಣ ಶರಧಿತರಣ ವ್ರತಂ,
ಭೀಷ್ಮನ ಶರದ ಶಯ್ಯೆ, ಸಾಕ್ರಟೀಸನ ಕರದ
ವಿಷಪಾತ್ರೆ, ಯೇಸುಕ್ರಿಸ್ತನ ಶಿಲುಬೆ — ಅವೆಲ್ಲಮುಂ
ಒರ್ಮೆಯ್ಯೊಳವತರಿಸಿದಂತಿದೆ ಮಹಾತ್ಮನೀ
ನಿರಶನದ ನೋಂಪಿ; ಸಂಗ್ರಾಮವೀರನ ದೃಢತೆ;
ಜ್ಞಾನವೀರನ ನಡತೆ; ಲೋಕ ಪಾಪ ಪ್ರತಿಮ
ಹಿಂಸಾ ವಿಷವನೀಂಟಿ, ಸಕಲರ ಸುಖಕೆ ತಾನೆ
ಬಲಿಯಪ್ಪ ಕಲಿತನದ ಶಾಂತಿವೀರನ ಮೃಡತೆ! —

ತೊದಲುತಿದೆ ಪ್ರಾರ್ಥನೆಯ ಜಿಹ್ವೆ. ಮೂಕವಾಗಿದೆ
ಹೃದಯದುತ್ಕಟ ಶೋಕದಾರ್ತರುದಿತಂ. — ಸಿದ್ಧಿ
ಬೇರುಂಟೆ ಸಕಲಸಾಧನದ ಗಂತವ್ಯಕ್ಕೆ?
ಯಾರ ಬದುಕೆಲ್ಲ ಬಾಳ್ವೆಯ ಸಫಲತೆಯೊ ಅದಕೆ
ಅದುವೆ ಗುರಿ. ಅಧ್ಯಾತ್ಮಮವ್ಯರ್ಥಮ್; ಅದರಿಂದೆ,
ಸತ್ತರೂ ಸಾರ್ಥಕಮೆ! ಬದುಕಲಿನ್ ಪೇಳ್ವುದೇನ್?
ನಿನ್ನನಭಿಷೇಕಿಸುವೆನಶ್ರುತೀರ್ಥದಿ, ನನ್ನ
ಓ ಜಗದ್ಗುರೂ, ಸರ್ವಮಂಗಳ ಶ್ರೀತರೂ!

೨೩-೨-೧೯೪೩

# ಶ್ರೀರಾಮಪುರದಲ್ಲಿ ಗಾಂಧಿಜಿ*

ದಿವ್ಯಮಂತ್ರವ ಜಪಿಸು; ಬೆಂಬಲ ಮಹಾತ್ಮನಿಗೆ!
ದೂರವೆನಿತಾದರೇನ್ ಪ್ರಾರ್ಥನಾ ಜವಕೆ?
ಇಂದೊಬ್ಬನೆಯೆ ನಡೆದನಾ ದೈವವನು ನೆಮ್ಮಿ
ಮತವೈರ ದಹಿಸಿದಾ ಶ್ರೀರಾಮಪುರಕೆ!
ನಿನ್ನ ಹೆಸರಿನ ಹಳ್ಳಿ ಅದು, ಓ ರಾವಣಾರಿ;
ನಿನ್ನ ನಾಮದ ಭಕುತನಾ ಪೂಜ್ಯಗಾಂಧಿ.
ನಿನ್ನ ಚರಿತೆಯನುಲಿದ ಕವಿಗೆ ನೀಡೀ ಭಿಕ್ಷೆ:
ಬೇಡುತಿಹೆನಸಹಾಯನಿಗೆ ಆಗು ರಕ್ಷೆ!
ಶಂಕೆಯೇತಕೆ, ಹೃದಯ? ಇರಲು ಜಗದೀಶ ದಯಾ
ರಕ್ಷೆಯಾಗದೆ ಪೇಳ್ ಅಮರ ಲಕ್ಷಸೇನೆ?
ಕೋಟ್ಯಾತ್ಮಸಂಬಂಧಿ ಪೇಳೊಂಟಿಗನೆ ಗಾಂಧಿ?
ಕೋಟಿ ಹೃತ್ ಪ್ರಾರ್ಥನಾ ಕೋಟಿ ಫಣೆಗಳನೆತ್ತಿ
ಕೋಟಿ ನಿಲ್ವನದೊ ಧರ್ಮಫಣಿರಾಟ್ ತಾನೆ!

೨೨-೧೧-೧೯೪೬

# ಸ್ವಾತಂತ್ರ್ಯ ಲಕ್ಷ್ಮಿಗೆ

**(ಪ್ರಥಮ ವಾರ್ಷಿಕೋತ್ಸವ ಸಂಧರ್ಭದಲ್ಲಿ)**
**೧೫-೮-೧೯೪೮**

ತುಹಿನಗಿರಿ ರಂಗದಲಿ ಧವಳಗಿರಿ ಶೃಂಗದಲಿ
ಮಿಂಚಿನಂಚಿನ ಮುಗಿಲ ಸಿಂಹಾಸನೆ!
ಬೆಳದಿಂಗಳೊಳ ಮಿಂದ ಹುಣ್ಣಿಮೆಯ ಹೊನ್ನಿರುಳು
ಅಸಾಂದ್ರ ನಕ್ಷತ್ರ ಚಂದ್ರವಸನೆ!
ವಸಂತ ಕಾನ್ತಾರ ಲತಾಂತ ಸಂಶೋಬಿ
ಅನಂತ ಸಂಕಾಶ ತುಷಾರ ರಶನೆ! —

ತೆಗೆ! ತೆಗೆ! —
ಸಾಲ್ಗುಮೀ ಬಣ್ಣನೆಯ ಲಲಿತ ಚಾಮರ ಸೇವೆ:
ಇಂತು ನಿನ್ನನದೆಂತು ಬಣ್ಣಿಸಲಿ ನಾನಿಂದು,
ಹೇ ಸ್ವಾತಂತ್ರ್ಯ ಲಕ್ಷ್ಮಿ? ಲಕ್ಷ್ಮಿ ಎಂಬರೆ ನಿನ್ನನ್
ಓ ದುರ್ಗಮಾ ದುರ್ಗೆ? ಬಲಿಪರಂಪರೆಯಿಂದೆ
ಪೋಷಿತಳ್ ನಿತ್ಯಯಜ್ಞೋದ್ಭವೆ ಮಹಾಕಾಳಿ
ನೀನಲ್ತೆ? ಮಸಣದೋಳ್ ತಪಮಿರ್ಪ ಕಾಪಾಲಿ
ನಿನಗಿನಿಯನಲ್ತೆ? ಹೇ ರಕ್ತ ತರ್ಪಣ ತೃಪ್ತೆ,
ನಿನ್ನನೆಂತಾಂ ಚಿತ್ರಿಸಲಿ ಪೇಳ್ ಪದ್ಮಪೀಠದಲಿ?
ತೊಡಿಸಲೆಂತಾಂ ನಿನಗೆ ಸುಮಚಾರು ಹಾರಮಂ,
ಹೇ ರುಂಡಮಾಲಿನಿಯೆ? ಜ್ವಾಲಾಮುಖಿಯೆ ದಿಟಂ
ನೀಂ; ರೌದ್ರಿಣಿಯೆ ದಿಟಂ!

ವರುಷವೊಂದಾಯ್ತುಲಾ
ನೀನುದ್ಭವಿಸಿ ನಮಗೆ, ಸರ್ವಮಂಗಳೆಯೆಂದು
ಸುಸ್ವಾಗತಂ ಬಯಸಿದೆವು ನಿನಗೆ ನಾವಂದು,
ಚಿತ್ರದ ಪುಲಿಯೆನೋತು ದಿಟದ ಪುಲಿಯಂ ಪಿಡಿದ
ಪಸುಳೆಪಾಂಗಾಯ್ತುಲಾ ನಮಗೆ! ಹೇ ಸ್ವಾತಂತ್ರ್ಯ
ಪರಕೀಯರೊಡ್ಡಿರ್ದ ಪಂಜರದೊಳಿರ್ದಂದು
ನೀನೆನಿತು ಚೆಲ್ವೆಯಾಗಿರ್ದೆ, ಮೃಗಶಾಲೆಯೊಳ್
ಕರ್ಬೊನ್ನೊಳಿರ್ಪ ಮೃಗರಾಜನಂ ಕ್ಷೇಮದಿಂ
ನೋಳ್ಪರ್ಭಕಂಬೋಲ್, ನಿನ್ನನೀಕ್ಷಿಸಿದರ್ಗೆ?
ಬಾಗಿಲಂ ತೆರೆದ ಬೋನಿನೊಳಿರ್ಪ ಕೋಳ್ಮಿಗಂ
ನೆಗೆದು ಹೊರಚಿಮ್ಮಿದಂತಾಯ್ತುಲಾ! ದಾಸರ್ಗೆ
ಶೃಂಖಲಾಲಂಕಾರ ಸೌಂದರ್ಯೆ ನೀಂ ದಿಟಂ!
ಅಂಜುಕುಳಿಗಳಿಗೆಲ್ಲ ನೀನ್; ಹೇಡಿಗಳಿಗೆಲ್ಲ ನೀನ್;
ಭೀಮಾಂಜನೇಯರಂ ಪೂಜಿಸುವ ಧೀರರ್ಗೆ
ಸರ್ವಮಂಗಳೆ, ಭದ್ರೆ, ಕಲ್ಯಾಣಿ, ಶಿವೆ, ಲಕ್ಷ್ಮಿ,
ಇನ್ನುಳಿದ ಹೆಂಬೇಡಿಗಳ್ಗೆಲ್ಲ ಮಾರಿ ಮೇಣ್
ಚಂಡಿ!

ಹೆತ್ತಯ್ಯನನೆ ಹುಟ್ಟಿದೊಡನೆಯೆ ತಿಂದೆ,
ಹೇ ಭಯಂಕರಿ! ಪಮಚನದಿಗಳಿ ನೆತ್ತರನೆ

ಹರಿಯಿಸಿದೆ! ಪ್ರಕೃತಿ ಸುಂದರ ಮಧುರ ಫಲಪುಷ್ಪ
ಪರಿಮಳದ ಕೌಶೇಯ ಕೋಮಲದ ಕಾಶ್ಮೀರದೊಳ್
ಪೊತ್ತಿಸಿದೆ ನಾಣ್ಗೇಡಿತನದ ಕಲಹಾಗ್ನಿಯಂ;
ಅಗ್ನಿಪುತ್ರಿಯೆ ದಿಟಂ ನೀನಗ್ನಿ ಸಂಭವೆ ಆ
ದ್ರೌಪದಿಯವೋಲ್! ಮತ್ತಿತ್ತಮೀ ತೆಂಕಣಾಸೆಯೊಳ್
ಗುರುತರ ಪ್ರಲಯ ನಾಟಕಕೆ ಮುನ್ನುಡಿಯುತಿಹೆ,
ಹೇ ರೌದ್ರಿ, ಕಿಡಿಕಿಡಿಯ ರಣನಾಂದಿಯಂ!

ಜನನಿ,
ನೀನಿಂದು ಕಾಳಿಯಾಗಿರ್ಪೊಡಂ ಬಲ್ಲೆನಾಂ
ನೀನಂತರದಿ ಭದ್ರೆ ಮೇಣ್ ಶುಭಂಕರಿಯೆಂಬುದಂ.
ಕ್ಲೇಶಮೂಷೆಯೊಳೆಮ್ಮ ಕಾಳಿಕೆಯ ಕಳೆಯದೆಯೆ
ನಿನ್ನ ಕಾಳೀಮುಖಂ ಲಕ್ಷ್ಮಿಯಾಗದು, ದೇವಿ.
ಬಾಪು ಮೇಣುಸ್ಮಾನರಂತೆ ಸಿಂಗರು* ನಿನ್ನ
ಯಜ್ಞ ಕುಂಡದ ಬೇಳ್ವೆಗಿಂಧನಗಳಾಗಿಹರ್;
ಈಗಳಶರೀರಗಳ್ ಆತ್ಮಬಲದಿಂದೆಮಗೆ
ಬೆಂಬಲಂ ನಿಂದಿಹರ್ ಧರ್ಮ ಸಂಗ್ರಾಮದೊಳ್.
ವೀರ ನಾಯಕರೆಮ್ಮ ರಾಜ್ಯಸೂತ್ರಂಗಳಂ
ಪಿಡಿದು ನಡಸಿರ್ಪರ್ ಅಕಂಪಿತರ್, ಅಚಂಚಲರ್,
ಮುಷ್ಟಿಯೊಳ್ ಮೇಣ್ ದೃಷ್ಟಿಯೊಳ್, ಅಂತೆಯೆ ತಪೋಧನರ್
ಋಷಿಯರುಂ ಕವಿಗಳುಂ ಸಂನ್ಯಾಸಯೋಗದಿಂ
ಕಾಳಿಯಿಂ ಕಮಲೆ ಮೈದೋರ್ಪಂತೆ ಮಾಡಲ್ಕೆ
ತೊಡಗಿಹರ್, ತಂತಮ್ಮ ಧರ್ಮದ ತಪಸ್ಯೆಯೋಳ್.
ಜ್ಞಾನಿಗಳ್, ವಿಜ್ಞಾನಿಗಳ್, ಯಂತ್ರ ಶಿಲ್ಪಿಗಳ್,
ಕುಂಚ ಲೇಖನಿ ಚಾಣ ನೀಗಿಲ್ಗಳೆಲ್ಲರುಂ
ನಿನ್ನ ಸಾಕ್ಷಾತ್ಕರಣ ಯಜ್ಞದೊಳಿಂದು ನಿಷ್ಠಿತರ್,
ಆ ಎಲ್ಲರನು ಹರಸು, ಹೇ ಸ್ವಾತಂತ್ರ್ಯ ದುರ್ಗೆ;
ನಮ್ಮ ಸಾಧನೆ ಸಿದ್ಧಿಗಾಣ್ಬಂತೆ ಶ್ರೀಪ್ರದಿಂದೀ
ದುರ್ಗಾವತಾರಮಂ ಮುಗಿಸಿ ಬಾ; ಮೂಡಿ ಬಾ
ಶಾಂತಿ ಶಶಿ ಕಾಂತಿಯಂ ಸಿಂಚಿಸಿ, ಲಸಲಕ್ಷ್ಮಿಯೋಲ್!

೧೦-೮-೧೯೪೮

* ಕಾಶ್ಮೀರದಲ್ಲಿ ಬಲಿಯಾದ ಭಾರತ ಸೇನೆಯ ದಳಪತಿಗಳು.

## ಶ್ರೀ ಸ್ವಾತಂತ್ರ್ಯೋದಯ ಮಹಾಪ್ರಗಾಥಾ

೧

ಓಂ!
ಭೂವ್ಯೋಮ ಸ್ವರ್ಲೋಕ ಲೋಕಂತರ ವಿಹಾರೆ,
ನಿಖಿಲ ಲೋಕ ಕವೀಂದ್ರಗಣ ಚಕಚಕಿತ ಹಾರೆ,
ಸರ್ವ ಭಾಷಾ ಸರೋವಾಙ್ಮಯ ರಸ ಶರೀರೆ,
ಸಕಲ ವಿದ್ಯಾ ಕಲಾ ಶ್ರೀಮದಮೃತಾಹಾರೆ,
ಶ್ರೀ ಕುವೆಂಪು ಚಿದಂಬರಾಮ್ನಾಯದೋಂಕಾರೆ,
ಕಯ್ ಮುಗಿದು ಬೇಡುವುನು ಏಳ್, ತಾಯೆ, ಏಳ್;
ಕಾಲ್ಗೆರಗಿ ಬೇಡುವೆನು ಏಳ್!
ನಿನ್ನಾ ಬೃಹದ್ ವೀಣೆಯಂ ಕರದಿ ತಾಳ್;
ನಿನ್ನಾ ಮಹದ್ವಾಣಿಯಿಂದಿರದೆ ಪೇಳ್
ಸ್ವಾತಂತ್ರ್ಯ ಗಾಥೆಯಂ, ಕೇಳ್,
ಓ ತಾಯೆ, ವಂದಿಸುವ ಕಂದನಂ ಕೇಳ್:
ಏಳ್, ಪೇಳ್, ಬಾಳ್!
ಸತ್ಯಲೋಕದಿನಿಳಿದು ಬಂದೆನ್ನ ಮಾನಸ ಸರೋಜಕವತರಿಸು;
ದಿವ್ಯ ಮೃದು ಕಿಂಕಿಣೀ ಕ್ವಣಿತ ನೂಪುರ ಚಾರು ಚರಣಗಳನಿರಿಸು;
ಸಾಗರದ ಶೈಲೋಪಮ ತರಂಗ ರುಂದ್ರ ವಿನ್ಯಾಸದಿಂ ಚರಿಸು;
ಇಂಚರದ ಕನ್ನಡದ ಕಿಡಿನುಡಿಗಳಂ ಕುಡಿನಾಲಗೆಗೆ ಕುಣಿಸಿ ಬರಿಸು!

೨

"ಏಕೆ ಈ ಉತ್ಸಾಹ?
ಏನು ಆನಂದವಿದು ನಿನಗೆನ್ನ ಕಂದ?"
"ಏಕೆ ಕೇಳುತಿಹೆ?
ಹೇಳುವುದು ನೋಡಮ್ಮ ಹರಿದೆನ್ನ ಬಂಧ!"

ಬಂಧನಂ ಮಾತ್ರಮಲ್ತಂಬಿಕೆಯ ಮೆಯ್ಯುಂದವೂ ಹರಿದಿದಲ್ತೆ?
ಸಂಕೋಲೆಯಂ ಖಂಡಿಪಾತುರದಿ ತಾಯೊಡಲ ಚೆಲ್ವು ತುಂಡಾಯ್ತೆ?"

"ಬಂದ ರೋಗವನೆಂತೊ ಪರಿಹರಿಸಲೊಂದಂಗಮಂ ಬೇರಿಡುವವೋಲ್
ಇಂದಿಟ್ಟರೇನಂತೆ ಮುಂದೆ ಸಂಧಿಸಹುದೆ ನದಿ ಸಿಂಧು ಸೇರ್ವವೋಲ್."

"ಐಕ್ಯವನೆ ಬಯಸಿ ನೀನಾದರದಿ ದುಡಿಯಲಾ ಶಂಕೆ ನನಗಿಲ್ಲ:
ಚಿನ್ಮಯಿ ಭಾರತಿಗೆ ಮೃಣ್ಮಯದ ಹಂಚಿಕೆಯ ವಂಚನೆಯೆ ಸಲ್ಲ!"

"ಆ ಪದಕೆ ದುಡಿಯುವೆವು , ಅದಕಾಗಿ ಮಡಿಯುವೆವು ಮೈತ್ರಿಯಲಿ, ತಾಯಿ.
ಸಹನೆಯನು ಶಕ್ತಿಯನು ಹೃದಯ ವೈಶಾಲ್ಯವನು ಕೃಪೆನೀಡಿ ಕಾಯಿ."

"ನಿನ್ನೆದೆಯ ನಿನಗೊರೆಯೆ ನಾ ಕೇಳಿದೆನು ಕಂದ:
ಸರ್ವಜ್ಞೆ ನನಗರಿವುದೆಲ್ಲ!
ನನ್ನಿಚ್ಛೆಯಿಂದುಕ್ಕುತಿದೆ ನಿನ್ನ ಆನಂದ:
ಶಕ್ತಿ ನಾನೆನಗರಿದುದಿಲ್ಲ!
ನಡೆವುದಿಂತೆಲ್ಲವೂ ನನ್ನಿಚ್ಛೆಯಿಂದ;
ಫಲಂ ಸಚ್ಚಿದಾನಂದ!
ದಿವ್ಯ ಲೀಲಾರ್ಥಮೆಂದರಿವುದಯ್, ಕಂದ:
ಹುಲುಗೆ ನಿನ್ನಾನಂದ!"

೩

ಹರಸಿದಳು ತಾಯಿ, ಹರಸಿದಳು ದೇವಿ, ಸಚ್ಚಿದಾನಂದೆ:
ನೆಲಸಿದಳು ಕವಿಶಿಶುವ ಕಂಠದಿ ಜಗದ್ವಂದ್ಯ ಚರಣಾರವಿಂದೆ!
ಬನ್ನಿ ಓ ಬನ್ನಿ, ಘಂಟೆಘೋಷದೊಳೆನ್ನಿ: "ಮಾತರಂ ವಂದೇ!"
"ಮತರಂ ವಂದೇ! ಮಾತರಂ ವಂದೇ! ಮಾತರಂ ವಂದೇ!"

ಬಾನಿಳಿದು ನುಲ್ವ, ಬುವಿ ಏರಿ ಸೋಲ್ವ ಆ ಮಲೆಯ ತಲೆಗೆ,
ಅನ್ನಮಯದಾಚೆ ತನ್ನತದೀಚೆ ಚಿನ್ಮಯದ ಶಿಲೆಗೆ,
ಬನ್ನಿ ಓ ಬನ್ನಿ ನಿತ್ಯಸುಂದರ ಸತ್ಯದಮೃತದಾ ನೆಲೆಗೆ!
ನಮ್ಮ ಸಂತೋಷವನು ವಿಶ್ವವಾಲಿಸುವಂತೆ ಉಲಿಯುವಾ ಮುದಕೆ
ಈ ನಿಮ್ನ ಸಾಲುವುದೆ? ಆ ಉನ್ನತಕೆ ಬನ್ನಿ, ಘೋಷಗೈವುದಕೆ.

ಓ ಬಾರ ಸಹ್ಯಾದ್ರಿ; ಬಾರ ಓ ವಿಂಧ್ಯಾದ್ರಿ; ಬಾರ ಹಿಮಾದ್ರಿ!
ಕುಲಾದ್ರಿಗಳೆ ಬನ್ನಿ, ಸುರಾದ್ರಿಗಳೆ ಬನ್ನಿ ,ಬಾರೈ, ಹರಾದ್ರಿ!
ಬಾರಮ್ಮ ಗಂಗೆ; ಬಾರಮ್ಮ, ತುಂಗೆ; ಬಾರ ಓ ಸಿಂಧು;
ಯಮುನೆ ಕಾವೇರಿ ಗೋದೆಯರ ಸೇರಿ ಬಾ, ಕೃಷ್ಣಬಂಧು:
ಸ್ವಾತಂತ್ರ್ಯಗಾಥೆಯಿ ಮಂತ್ರಂಮಂಗಳಕೆ ತೀರ್ಥಂಗಳಂ ತಂದು
ಕುಂಭ ಕುಂಭದಿ ತುಂಬಿ ಎರೆಯಿರಂಭೋಧಿಗಳನೋಜೆಯಿಂನಿಂದು,
ಭಾರತಾಂಬೆಯ ಮುಡಿಗೆ ಬಿಂದು ಬಿಂದುಗಳಾಗೆ ರತುನಗಳೆ ಮಿಂದು.

೪

ಏನು ಕಾಂತಿಯಿದು ಏನು ಶಾಂತಿ ಈ ತುಂಗಶೃಂಗದಲ್ಲಿ!
ಆವ ಲೋಕದಾಲೋಕವಿದು ನಮ್ಮನೊಸಗೆ ಕರೆವುದಿಲ್ಲಿ?
ಮರ್ತ್ಯವಲ್ಲವಿದು ದಿವ್ಯಧಾಮವದೊ ನೋಡು, ಬೆಳಗುಮೆಯ್ಯ
ಪುಣ್ಯಮೂರ್ತಿಗಳು ಕೀರ್ತಧವಳರೆನೆ ಹರಸಲೆತ್ತಿ ಕಯ್ಯ
ಸಾಲು ಸಾಲರಳಿ ಹಾಲುರುಳಿದಂತೆ ಮಿಂಚಿ ಮೆರೆವರಯ್ಯ!

ಆದಿ ವಿದ್ಯೆಯದೊ ವೇದಪುರುಷನದೊ ದಿವ್ಯ ಉಪನಿಷತ್ತು
ಭರತಮಾತೆಯಾ ನಿತ್ಯ ರೂಪವನು ನೆತ್ತಿಯಲ್ಲಿ ಹೊತ್ತು
ಹರಕೆಗೈವರದೊ ದೇಶದೇಶಕಾದೇಶ ಸುಧೆಯನಿತ್ತು!

ಆ ವಿಭಕ್ತೆ ತಾನಿಲಿ ಅವಿಭಕ್ತೆ ನಿತ್ಯಮೈಕ್ಯಭೂತೆ;
ದ್ವೈತೆ ಮೃತ್ತಿನಲಿ, ಅದ್ವೈತಿ ಚಿತ್ತಿನಲಿ, ದಿವ್ಯೆ, ಮಹಾಶ್ವೇತೆ:
ಒಡಲು ಬಿರಿದೊಡೇನ್? ಉಸಿರು ಒಡೆಯುವುದೆ? ಭಕ್ತಿಭಾವಜಾತೆ
ಅನೇಕವಾಗಿಯೂ ಏಕವಾಗಿಹಳು ನೋಡು ಭರತಮಾತೆ,
ಸರ್ವ ತತ್ತ್ವ ಮತಧರ್ಮ ಸತ್ವ ಪೀಯೂಷ ಸ್ತನ್ಯದಾತೆ
ಹಿಂದು ಮುಸಲ ಸಿಖ ಕ್ರೈಸ್ತ ಪಾರಸಿಕ ಮುಖಾಖಿಲಾತೀತೆ!

ತಾಯನೋಲೈಸಲಿದೆಕೊ ನೆರೆದಿಹುದು ಋಷಿ ಮಹರ್ಷಿ ವೃಂದ,
ಬೆಳಕೆ ಮುಗಿಲಾಗಿ, ಮುಗಿಲೆ ಮೊಗವಾಗಿ ಕಣ್ಣು ಮೂಡಿದಂದ.
ಚಿಂತೆಯೆಂತಂತು ಚಿದ್ರೂಪವಾಂತು, ದೇವರಾಜ ಇಂದ್ರ
ದೇವ ದೇವತಾ ಸಂಘ ಸಹಿತ ಆನಂದ ನೃತ್ಯ ರುಂದ್ರ
ಬಂಧಮುಕ್ತಂಗೆ ಪೂಜೆಗೆಯ್ವವೋಲ್, ಕೋಟಿ ಸೂರ್ಯ ಚಂದ್ರ

ಘೋಂಕನುದಿಸಿ ಬಂದಂತೆ ಕೋರೈಸೆ ವಿಶ್ವನಯನ ಕೇಂದ್ರ
ಭಾರತಾಂಬಿಕಾ ಮುಕ್ತಿ ಪೀಠವದೊ ಸಿದ್ಧ ಯೋಗಿ ಸಾಂದ್ರ!

ನೋಡು ಪೌರಾಣ ಲೋಕದವತಾರರವರೆ ರಾಮ, ಕೃಷ್ಣ;
ನೋಡು ತೀರ್ಥಂಕರಾದಿ ಬುದ್ಧ ಗುರು ದೇವ ರಾಮಕೃಷ್ಣ!
ನೋಡು ಕವಿವರರು ವ್ಯಾಸ, ವಾಲ್ಮೀಕಿ, ಕಾಳಿದಾಸ, ಭಾಸ;
ಬಳಿಯೆ ತಳತಳಿಸುತಿಹನು ಕಾಣು ಕರ್ಣಾಟ ಕವಿ ಕುಲೇಶ!
ಅಲ್ಲಿ ವಂಗ ಗುರು, ಇಲ್ಲಿ ನಾನಕರು, ಸಂತ ಕವಿ ಕಬೀರ:
ಇತ್ತ ಸಿಡಿಲಾಳು ಕಾಣವನೆ ನಿನ್ನ ರಾಜಕೀಯ ವೀರ!

ನಿನ್ನ ಆಚಾರ್ಯನವನೆ  ಸಂಪೂಜ್ಯನೆಸೆವನತ್ತ ನೋಡು;
ಕ್ರಿಸ್ತ ಪೈಗಂಬರಾದಿ ದಿವ್ಯರಿದೊ, ಮಣಿದು ನಮನ ಮಾಡು!

ಅಲ್ಲಿ ರಾಜರ್ಷಿ, ಇಲ್ಲಿ ಯಂತ್ರರ್ಷಿ, ಅತ್ತ ಚಕ್ರವರ್ತಿ;
ಅವರೆ ಶಿಲ್ಪಿವರರಿವರೆ ಗಾಯಕರು , ನಮ್ಮ ನೆಲದ ಕೀರ್ತಿ.
ಇತ್ತ ಕೈಮುಗಿದು ಕಾಣ ನಿಂತಿಹನು ಉರಿವ ದೀಪವರ್ತಿ;
ಹೆಸರ ಮೆರೆಯದೆಯೆ ಉಸಿರನಿತ್ತವನು, ಬಾಳ್ವೆಗುಸಿರ್ ಸ್ಫೂರ್ತಿ,
ಹೊಲವನುತ್ತವನು, ಹೊರೆಯ ಹೊತ್ತವನು, ದುಡಿವ ದೈವಮೂರ್ತಿ!
ದೇವವಾಣಿಗಳ್ ಕೋಟಿ ಕಂಠಗಳ್ ಉಳಿವ ಘೋಷವೊಂದೇ;
ತಳುವಿರೇಕೆ ನೀವೋಡಿ ಬನ್ನಿ ನಾವ್ ಕೂಡಿಕೊಳುವ ಇಂದೇ.
ಸುರರ ಕೊರಳುಲಿಗೆ ನರರ ಕೊರಳುಲಿಯ ನೆರೆದು ಉಲಿವ: 'ವಂದೇ!
ಮಾತರಂ ವಂದೇ! ಮಾತರಂ ವಂದೇ! ಮಾತರಂ ವಂದೇ!'

೫

ಶ್ರೀದಿನಂ, ದಿಟಮಿದು ಮಹಾದಿನಂ:
ಗುರುದೇವ ಪರಮಹಂಸ ಮಹಾಸಮಾಧಿಯ ದಿನಂ!
ಅರವಿಂದ ಯೋಗೀಂದ್ರ ಜನ್ಮೋತ್ಸವದ ದಿನಂ!
ಸಾಮ್ರಾಜ್ಯಮಂ ತ್ಯಜಿಪ ಮೈತ್ರಿಯ ಮಹದ್ ದಿನಂ
ಭಾರತಸ್ವಾತಂತ್ರ್ಯ ಪುಣ್ಯೋದಯದ ದಿನಂ!
ಶ್ರೀಮನ್ ಮಹಾದಿನಂ, ಭಗವದ್ ದಯಾ ದಿನಂ,
ದಿಟಮಿದು ವಿರಾಡ್ ದಿನಂ!

ನಮೋ ನಿನಗೆ, ದಿನದೇವ!
ಪ್ರೇಮ ಚೇತನ ಮಹದ್ ವ್ಯೋಮದಿಂ ಮೂಡಿ ಬಾ;
ವೈರದ ತಮಶ್ಶಿಖರ ಶೈಲಮಂ ಮೆಟ್ಟಿ ಬಾ;
ಮನದ ಹಿಮಘನದ ನಿದ್ರಾ ಜಡವನೆಳ್ಚರಿಸಿ ಬಾ;
ಜೀವಗಳ ಚೇತನ ಸ್ರೋತಮಂ ನೆರೆ ಹರಿಸಿ ಬಾ;
ದಾಸ್ಯ ಶೃಂಖಲೆಗಳಂ ಹೃದಯದಿ ಕಲಚಿ ಬಾ;
ಮನ ಮನದ ಬಾಗಿಲ್ಗಳಂ ಬಿರಿದು ಸೆರೆ ಬಿಡಿಸಿ ಬಾ!
ಬಾ, ಬಾರ, ನೀ ತಾರ ಭಗವದಾವೇಶಮಂ,
ಧರ್ಮಾರ್ಥ ಕಾಮಕ್ಕೆ ಮೋಕ್ಷದುದ್ದೇಶಮಂ!

ಕದಿರ ಕೈದುವನಾಂತು ಕತ್ತಲೆಯನೊತ್ತಿ ಬಾ;
ಜನ ಹೃದಯ ಹೊಲದಲಿ ಅಹಿಂಸೆಯಂ ಬಿತ್ತಿ ಬಾ;
ಲೋಕಕೆ ಅಶೋಕ ಸಂದೇಶಮಂ ಸಾರಿ ಬಾ:
'ಧರ್ಮಕ್ಕೆ! ಸತ್ಯಕ್ಕೆ!'
'ನಾವೆತ್ತಿದೀ ಧ್ವಜಂ!
'ಪುಣ್ಯಕ್ಕೆ! ಪ್ರೇಮಕ್ಕೆ!'
'ತಾನಕ್ಕೆ ಬಲ್ ಭುಜಂ!'
ಎಂದಲಿವ ಕಂಠ ಕೋಟಿಯೊಳುದಿಸಿ ಬಾ!
'ಜಯಮಕ್ಕೆ ! ಶಭಮಕ್ಕೆ! ಗೆಲವಕ್ಕೆ! ಸೊಗವಕ್ಕೆ!
ಭಾರತ ಚಿರಾಯುವಕ್ಕೆ!'
ಎಂಬ ಮಂತ್ರಕೆ ಮೂಡಿ ಬಾ; ತೊಳಗಿ ಬಾ, ಬೆಳಗಿ ಬಾ, ಏರಿ ಬಾ! ಬಾ ಬಾ!

ಸಾರಿ ಬಾ ಸರ್ವರ್ಗೆ ಸ್ವಾತಂತ್ರ್ಯಮಂ;
ಸಾರಿ ಬಾ ಸರ್ವರ್ಗೆ ಸಾಮ್ಯತ್ವಮಂ;
ಸರ್ವರ್ಗೆ ಸಾರಿ ಬಾ ಸೌಹಾರ್ದಮಂ:
ಸರ್ವ ಲೋಕದ ಸರ್ವ ಸಂತೋಷಮಂ,
ಸರ್ವರಿಂ ಸರ್ವರಾ ಉದ್ಧಾರಮಂ!

೬

ನನಸಾದುದೊ ಶತಮಾನದ
ಶತ ಶತ ಮನದಾ ಕನಸಿಂದು:
ಸ್ವಾತಂತ್ರ್ಯದ ಸಂಗ್ರಾಮದಿ

ಗತಿಸಿದಮಿತ ಹುತ ಆತ್ಮರ
ಬಲಿದಾನಂ ಫಲಿಸತೊ ಇಂದು!
ಓ ಎಳೆಯರಿ, ಓ ಮುದಿಯರೆ,
ಓ ಗೆಳೆಯರೆ ಐತನ್ನಿ;
ಹೊಸ ಬಾಳಿಗೆ ಐತನ್ನಿ;
ಹೊಸ ಬಾಳಿಗೆ ಹೊಸನೋಂಪಿಯ
ಹೊಸ ಕಂಕಣವನು ತನ್ನಿ:

ಆ ಜಾತಿಯ ಈ ವರ್ಣದ
ಭೇದದ ಭೂತವನಿಂದೇ
ಸಂಹರಿಸುವ ಸುರ ನೀತಿಯ
ವ್ರತವಾಗಲಿ ಪಥವೊಂದೇ!
ಪೊರೆಗಳಚಿದ ಹೊಸ ನಾಗರ
ಹೆಡೆಯೆತ್ತುವ ತೆರದಿ
ಹೊಸ ನೋಂಪಿಯ ಹೊಸ ಹುರುಪಿಂ
ಝುಳಪಿಸಲಾ ಖುತ ಖಡ್ಗಂ
ದೃಢ ಮುಷ್ಟಿಯ ಕರದಿ!

'ದೇವಿಗೆ ಬಲಿ ಭಾರತ ಕಲಿ!'
ಎಂಬುವ ಉಲಿ ತೊಟ್ಟಿಲ ಬಳಿ
ಜೋಗುಳವಾಗಲಿ ಬಾಯ್ಗೆ;
ಕಂದನ ತೋಳ್ ತಾ ಕರವಾಳ್
ಜಗದಂಬೆ ದಿಟಮೆಂಬದೆ
ನಂಬುಗೆಯಾಗಲಿ ತಾಯ್ಗೆ!
ಇನ್ನೆಂದೂ ಮುಂದೆಂದೂ
ಬರದಿರಲಿಂದೆಯ್ತುಂದೀ
ಸ್ವಾತಂತ್ರ್ಯಕೆ ಕುಂದು.
ಪರುಷಾರ್ಥದ ಪರಮಾರ್ಥದ
ಆಧ್ಯಾತ್ಮಿಕ ಚೇತನಕೀ
ಸ್ವಾತಂತ್ರ್ಯದ ಸಂಕೇತವೆ
ಚಿರಕೇತನವಾಗುವವೋಲ್
ಕೃಪೆಯಿರಲೆಂದೆಂದೂ!

೭

ಲೋಕ ಮಲಗಿದಂದು ನೀ ನಟ್ಟ ನಡೂ ರಾತ್ರಿ
ಎಚ್ಚರಾಂತ; ಅವಿಶ್ರಾಂತೆಯಾದೆ ಪುನರ್ ಯಾತ್ರಿ.*
ಸರ್ವಕಾಲ ಸರ್ವದೇಶ ಸರ್ವ ಮೋಕ್ಷ ಮಂತ್ರೀ,
ಅಸ್ವತಂತ್ರೆ ಸುಸ್ವತಂತ್ರೆಯಾದೆ ವಿಶ್ವತಂತ್ರೆ
ಮನುಜ ಕುಲದ ಪುರೋಗತಿಗೆ ಪೂಜ್ಯ ಅಧಿಷ್ಠಾತ್ರಿ,
ಅಖಂಡಿತೇ ಸಪಂಡಿತೇ ನೀನೆ ಜಗದ್‌ಧಾತ್ರಿ.
ಜಡವನೊದ್ದು ನಿದ್ದೆಗೊಡಹಿ ಎದ್ದು ನಡೆವ ವೇಳೆ
ಚರಣ ಚಲನ ಚಕಿತವಾಯ್ತು ಚತುರ್ವಾರ್ಧಿ ವೇಲೆ.
ಆ ಸುವಾರ್ತೆಗಾಶುವಾರ್ತೆ ನೆರವನಿತ್ತು ಪೇಳೆ
ಒರ್ವನಿರುಳ ಮೌನದಲ್ಲಿ ಧ್ಯಾನ ಮನದಿ ಕೇಳೆ
ಬೆಳ್ಳಿಬೆಟ್ಟದಿಂದ ದುಮುಕಿ ರುದ್ರನಟ್ಟಹಾಸ
ತಿರೆಯ ತಟ್ಟಿದಂತೆ ಬಂತು ಜನ ಸಮುದ್ರ ಘೋಷ!
ಏನು ಘೋಷ! ಏನು ತೋಷ! ಏನು ಆಽವೇಶ!
ದೇವವೃಂದ ಸಹಿತ ಬಂದ ಇಂದ್ರ ರುಂದ್ರ ಘೋಷ!

ಆಲಿಸದರೊಳಿನಿತು ಇಲ್ಲ ಲೇಶಮಾತ್ರ ರೋಷಃ
ಧ್ವೇಷವಿಷವನೀಂಟೆ ರುದ್ರನಮೃತಕಿಹುದೆ ದೋಷ?
ಪ್ರಾಣ ಮನೋಮಯಕೆ ಏರಿ ಅನ್ನಮಯ ವಿಕಾಸ
ಅನ್ನಮಯಕೆ ಇಳಿದಿದೆ ಆನಂದಮಯದ ಕೋಶ!

ಏಳು ತಾಯಿ, ಬಾಳು ತಾಯಿ, ಜಗತ್ ಕಽಲ್ಯಾಣಿ;
ಯುಗ ಯುಗಾಯು ಜಗವನಾಳು, ದರ್ಮಚಕ್ರಪಾಣಿ;
ದಿಗ್‌ದಿಗಂತ ರಣಿತಮಕ್ಕೆ ನಿನ್ನ ದಿವ್ಯ ವಾಣಿ;
ಸುಕೃತದಿಂದೆ ಎದ್ದು ನಿಂದೆ; ನಡೆ ಮುಂದೆ, ರಾಣಿ!
ನುತಿಗೆ ನಿಂದೆಗೊಲವದೊಂದೆಯಾಗಿ ತೆರಣು ಮುಂದೆ;
ಮರಳಿ ಹಿಂದೆ ಬೀಳದಿಂದೆ ನುಗ್ಗು ಮುಂದೆ ಮುಂದೆ!
ತಾಯಿ ತಂದೆ ಗುರುಗಳೊಂದೆಯಾಗಿ ಬಂದೆ, ದೇವಿ;
ನಡೆ ಇಂದೆ, ನಡೆ ಮುಂದೆ, ನಡೆ ನಮ್ಮನೋವಿ!

ಶಾಂತಿ ಸತ್ಯ ಮುಕ್ತಿ ಧರ್ಮ ತತ್ತ್ವ ಮಹೋದಾತ್ತೆ
ಕಾವ್ಯ ಶಿಲ್ಪ ನೃತ್ಯ ಗಾನ ಸಕಲ ಕಲಾವೆತ್ತೆ

ಶ್ರದ್ಧೆಯಾಗಿ, ಬುದ್ಧಿಯಾಗಿ, ತಪಸ್ ಶಕ್ತಿಯಾಗಿ,
ಭಗವದಾತ್ಮ ಸಿದ್ಧಿಗಾಗಿ ಪರಾಭಕ್ತಿಯಾಗಿ,
ನಡಸು ನಮ್ಮನೆಲ್ಲ, ಅಮ್ಮ , ಪೂರ್ಣಯೋಗಕಾಗಿ!

ಆದಿಶಕ್ತಿ, ಅಂತ್ಯಮುಕ್ತಿ, ಸಾಂತೆ ಮೇಣನಂತೆ:
ದೇಶ ದೇಸದವರಿಗವರ ದೇಶ ದೇವಿಯಂತೆ
ತೋರಿ ನಮಗೆ ತೋರುತಿರುವೆ ಭರತಮಾತೆಯಂತೆ!

ನಮೋ ದೇವಿ! ನಮೇ ತಾಯಿ! ನಮೋ ಭರತಮಾತೆ!
ಅಸಾಮನ್ಯೆ, ಲೋಕಮಾನ್ಯೆ, ಧನ್ಯೆ ಭಾಗ್ಯದಾತೆ!
ನಮಸ್ ಸತ್ಯೆ, ನಮೋ ನಿತ್ಯೆ, ನಮೋ ಜಗನ್ಮಾತೆ!

೮

ಜಯ ಜಯ ಜಯ ವಿಜಯಿ ಭವ, ಹೇ ವೈಜಯಂತಿ!
ನಿನ್ನ ನಿಳಲೊಳೇಳ್ಗೆವಡೆದು ಗೆಲ್ಗೆ ಭುವನ ಶಾಂತಿ!
ಓ ಸುಮರ್ಣೆ, ಹೇ ಅವರ್ಣೆ, ನೀಲಿಮಾ ತ್ರಿವರ್ಣೆ,
ಉಷಸ್ ಪೀತೆ, ದಿವಾ ಶ್ವೇತೆ, ನಿಶನ್ಯೈಲ ಜಾತೆ,
ಸುಧಾ ಶಂಖ ಶಂಕರಾ ಗದಾ ಭಯಂಕರಾಽಜಿತೆ,
ಅಮೃತ ದಿವ್ಯಖಚಿತ ಭವ್ಯ ಧರ್ಮಚಕ್ರ ರಾಜಿತೆ,
ಪ್ರೇಮ ನಿನ್ನ ಪರಮ ಅನ್ನವಾಗಲವನಿಪೂಜಿತೆ!

ಮೈತ್ರಿ ಸಹನೆ ಶಾಂತಿಗಾಗಿ ನಭೋ ಗಾಮಿಯಾಗು!
ಪೊಡವಿಯಾಳು! ಕಡಲ ಸೀಳು! ಗೆಲ್ಲು, ಬಾಳು, ಹೋಗು!
ಗ್ಲಾನಿಯಲ್ಲಿ ಹಾನಿಯೆಲ್ಲಿ ಅಲ್ಲಿ ರಕ್ಷೆಯಾಗು;
ಕ್ರೌರ್ಯವೆಲ್ಲಿ ಪಾಪವೆಲ್ಲಿ ಅಲ್ಲಿ ಶಿಕ್ಷೆಯಾಗು;
ಕ್ಷಾಮ ಕಷ್ಟ ನಷ್ಟಗಳಲಿ ನೀ ಸುಭಿಕ್ಷೆಯಾಗು:
ಅಣ್ಣನಿಹನೋ ಕನ್ನಡದಾ ಭುಜಧ್ವಜೋದ್ದಂಡ!
ಚಿಣ್ಣ, ನಿನಗೆ ಬೆಂಬಲಮಿರೆ ಗಂಡಭೇಽರುಂಡ
ಶಂಕೆ ಬೇಡ; ಬಿಂಕದಿಂದ ನುಗ್ಗು, ನಡೆ, ಹೋಗು;
ಸದಾ ಕಾಲ ಸರ್ವದೇಶ ಸಕಲ ಮಿತ್ರನಾಗು!

ಭರತಖಂಡದಗ್ನಿ ಕುಂಡದಿಂದ ಸಿಡಿದ ಕೆಂಡ
ಲೋಕ ತಾಪ ಹರಣ ರೂಪ ಧರಿಸಲಾಯ್ತು ಝುಂಡಾ!
ನಮ್ಮ ನಾಡ ಪೆಂಪಿನೊಂದು ನೀಳ್ದ ಬಾಹು ಶಾಖೆ
ದಿವಿಜರೂರ್ಗೆ ಧಾಳಿಯಿಡುವುದೀ ಮಹಾ ಪತಾಕೆ!
ಗೌರವಕ್ಕೆ ಬಣಗು ಟೆಕ್ಕೆಯೂರೆಗೋಲು ಸಾಕೆ?
ಧ್ವಜಸ್ತಂಭ ನಿನಗೆ ಮೇರು: ದ್ಯುಮಂಡಲಾವಲಂಬಿ!
ರಜತ ಶೈಲ ನಿನಗೆ ತೇರು: ದಿವೌಕಸಾವಲಂಬಿ!
ಹಾರು, ಏರು, ಓ ಧ್ವಜವೆ,
ವೈನತೇಯ ಸಮ ದ್ವಿಜವೆ!
ಚಂದ್ರ ಚೂಬಿ, ಸುರ್ಯ ಚುಂಬಿ, ಖಚರ, ಚರಣ ಚುಂಬಿ,
ಹಾರು ಏರು, ನೋಡುತಿಹುದು ನಾಡು ನಿನ್ನ ನಂಬಿ.
ತ್ರಿದಶ ಹರ್ಷ ವೃಷ್ಟಿಯದೋ ವರ್ಷ ಛದ್ಮರೂಪಿ;
ವಿಧಿಯ ಹರಕೆ ಮೆರೆವುದದೋ ಇಂದ್ರಚಾಪರೂಪಿ:*
ದೇವರಿಗೂ ಮಿಚ್ಚಿದೆಂದು ನಂಬದವನೆ ಪಾಪಿ.!

ಅಮರ ಬಾಹು, ಅಸುರ ರಾಹು, ನೆಲಕೆ ಮುಗಿಲ ಕಾಹು;
ಕರ್ಮ ಜಗಕೆ ಧರ್ಮಪುರುಷನಿಟ್ಟ ಬೆರಳ ಬೇಹು;
ಹೇ ತ್ರಿವರ್ಣ ಕೇತನ,
ನೀನೆ ನಮ್ಮ ಚೇತನ;
ಪ್ರೇಮ ಧೈರ್ಯ ಸತ್ಯ ಧರ್ಮ ಶಾಂತಿ ಚಿರನಿಕೇತನ!

೬

ಮರೆವುದಿಂತಾ ನಮ್ಮ ಸ್ವಾತಂತ್ರ್ಯ ಶಿಲ್ಪಿಯಂ
ದಿವ್ಯ ದಿನದೀ ಶುಭ ಮುಹೂರ್ತದಲ್ಲಿ?
ಮರೆವುದೆಂತಯ್ ಭುವನ ಗೌರವ ಮಹಾತ್ಮನಂ
ಸ್ವಾತಂತ್ರ್ಯದೀ ಸುಪ್ರಭಾತದಲ್ಲಿ?
ಹಜ್ಜೆಹಜ್ಜೆಯನಿಡಿಸಿ ಕೈಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆಯಲ್ಲಿ?
ಎಲ್ಲಿ? ಓ ಅವನೆಲ್ಲಿ? ನಿಚ್ಚವೂ ನಮ್ಮೆದೆಯ
ನಂಜೀಂಟುವಾ ನೀಲಕಂಠನೆಲ್ಲಿ?

ಜನಮನದ ಹಗೆತನದ ರೋಷ ಹಾಲಾಹಲದಿ
ಹಾಲುದಿಸಿ ಬರುವಂತೆ ಮೂಡಿ ಬಂದೆ!
ಕ್ರಿಸ್ತಿಬುದ್ಧರ ಮೈತ್ರಿಯಂ ಸಾರಿ ಸಾಧಿಸುತೆ
ವಿಶ್ವಸೇವಕರ ಪಂಕ್ತಿಯಲಿ ನಿಂದೆ!
ಯಂತ್ರನಾಗರಿಕತೆಯ ರಾಜಕೀಯದ ಕುಟಿಲ
ತಂತ್ರಕಧ್ಯಾತ್ಮ ಮಂತ್ರವನು ತಂದೆ!
ಇಂದಿನುತ್ಸವಕೆಮ್ಮನುಳಿದೆಲ್ಲಿ ಹೋದೆ, ಹೇ
ಸ್ವಾತಂತ್ರ್ಯ ಕನ್ಯೆಯಂ ಪಡೆದ ತಂದೆ?

ಇಲ್ಲಿ ಉತ್ಸವದೊಳವನಿಲ್ಲ, ಆ ದೂರದಲಿ
ಕ್ರೋಧ ಕಾರ್ಪಣ್ಯ ರೋದನಗಳೊಡನೆ,
ಕೆನ್ನೀರು ಕಣ್ಣೀರುಗಳ ಹೊನ ಗೋಳ್‌ನಡುವೆ
ದಾರಿದ್ರ್ಯ ದೈನ್ಯ ಧನಮದಗಳೊಡನೆ
ವಾದಿಸತೆ ಬೋಧಿಸುತೆ ಕರುಣೆಯಂ ಸಾಧಿಸುತೆ
ಭಕ್ತಿಯಿಂ ದೇವನಂ ಪ್ರಾರ್ಥಿಸುತ್ತೆ
ನಿರಶನವ್ರತನಿಷ್ಠನಾಗಿಹನು ನೋಡಲ್ಲಿ
ಧರ್ಮ ಶಕ್ತಿಯ ಕೃಪೆಯನರ್ಥಿಸುತ್ತೆ!
ಈಶ್ವರ ಕೃಪಾಬಲದ ಯಾಚನೆಯ ಸಲುವಾಗಿ ಭೂಮಾತೆ ಕಳುಹಿಸಿಹ ದೂತಭಿಕ್ಷು;
ಈ ಲೋಕಮಂ ನಿರ್ನಿಮೇಷಮವಲೋಕಿಸುವ
ಆ ಲೋಕ ಋತದೊಂದಲೋಕ ಚಕ್ಷು;
ಸೃಷ್ಟಿಕರ್ತಂ ಸೃಷ್ಟಿ ತಾನಾಗಿ ಸೃಷ್ಟಿಯೊಳೆ
ದುಡಿಯತಿರ್ಪುದಕವನೆ ದಿವ್ಯಸಾಕ್ಷಿ!
ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯ ಸಂಭ್ರಮಕೆಃ ಹಾಡು, ಪಕ್ಷಿ!

೧೦

ಜಯ್ ಶ್ರೀ ಗಾಂಧಿಗೆ ಜಯ್!
ಜಯ್ ಸ್ವಾತಂತ್ರ್ಯ ಶ್ರೀ ನಾಂದಿಗೆ ಜಯ್!
ಜಯ್ ಭಗವತ್ ಕೃಪೆಯಾ ಶ್ರೀಮತ್ ಕರುಣೆಯ
ಚಿರಬಂಧಿಗೆ ಜಯ್!
ಜಯ್ ರಾಷ್ಟ್ರಧ್ವಜಕೆ!
ಜಯ್ ಸ್ವಾತಂತ್ರ್ಯ ಸಾಧಿಸಿದಾ ವೀರ ಶ್ರೀ ಭುಜಕೆ!

ಜಯ್ ಸತ್ಯ ಅಹಿಂಸಾ ತ್ಯಾಗ ಸಮರ್ಪಣದಾ
ಋತಚಿನ್ಮಯ ನಿಜಕೆ!

ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಚಾಮುಂಡಿಯ ಪದತಲಕೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಪುರುಷೋತ್ತಮ ಕ್ರೀಬಲಕೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಪರಮಹಂಸ ಗುರುವರನಡಿಗೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಅರುಣಾಚಲ ಋಷಿಯೆದೆಗುಡಿಗೆ!
ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಅರವಿಂದರ ಸಿರಿಮುಡಿಗೆ!
ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಚಿರ ಕಲ್ಯಾಣಕೆ ಅಡಿಗಡಿಗೆ!
ರಕ್ಷೆಯಾಗಲಿ ರಾಮಚಂದ್ರನ ರುದ್ರ ಕೋದಂಡ!
ರಕ್ಷೆಯಾಗಲಿ ಆಂಜನೇಯನ ವಜ್ರ ದೋರ್ದಂಡ!

ಕೋಂಟೆ ನಿಲ್ಲಲಿ ಕೃಷ್ಣಚಕ್ರದ ಭೀಷ್ಮ ಲಯಕೋಪ!
ಕೋಂಟೆ ನಿಲ್ಲಲಿ ಭೀಮಸೇನ ಭುಜ ಗದಾಟೋಪ!

ಕಾವಲಾಗಲಿ ಕಲಿ ಧನಂಜಯ ಚಾಪ ಗಾಂಡೀವ!
ಕಾವಲಾಗಲಿ ರುಂದ್ರ ಬಲರಾ ವಾಲಿ ಸುಗ್ರೀವ!

ರಕ್ಷೆಯಾಗಲಿ ದಕ್ಷಿಣೇಶ್ವರ ಪರಮ ಗುರುದೇವ!
ರಕ್ಷೆಯಾಗಲಿ ಸಕಲ ರಕ್ಷಕನಾ ಮಹಾದೇವ!

ಓಂ ಶಾಂತಿಃ ಶಾಂತಿಃ ಶಾಂತಿಃ

೧೫-೮-೧೯೪೭

* ಕ್ರಿ.ಶ. ಸಾವಿರದ ಒಂಬಯ್ನೂರ ನಾಲ್ವತ್ತೇಳನೆಯ ಅಗಸ್ಟ್ ಹದಿನಾಲ್ಕನೆಯ ತಾರೀಖು ಮಧ್ಯರಾತ್ರಿ ಕಳೆದ ಮರುಕ್ಷಣದಲ್ಲಿ ಅಗಸ್ಟ ಹದಿನೈದು ಜಗಕ್ಕೆ ಕಾಲಿಟ್ಟೊಡನೆ ಭಾರತ ದೇಶ ಸ್ವತಂತ್ರವಾಗಿ ತನ್ನ ಸ್ವಾತಂತ್ರ್ಯವನ್ನು ಲೋಕಕ್ಕೆ ಘೋಷಿಸಿತು. ಅಂದಿನ ಇರುಳು ಹನ್ನೊಂದು ಗಂಟೆಯಿಂದ ಹನ್ನೆರಡೂವರೆ ಗಂಟೆವರೆಗೆ ರೇಡಿಯೋ ಪಕ್ಕದಲ್ಲಿ ಕುಳಿತು ದೆಹಲಿಯಿಂದ ಬರುತ್ತಿದ್ದ ವ್ಯಾಖ್ಯಾನ ಸಮೇತವಾದ ವಾರ್ತಾ ಘೋಷಣೆಯನ್ನೂ ವಿಫುಲ ಜನಸಂಘ ಘೋಷವನ್ನೂ ಆಲಿಸುತ್ತಿದ್ದ ಕಲ್ಪನಾ ಶಕ್ತಿ ಸಮನ್ವಿತರಾದ ಪುಣ್ಯವಂತರಿಗೆ ತಮಗಾದ ಅನುಭವಕ್ಕೆ ಪ್ರತಿಮೆಗಳಾಗಬಹುದು ಈ ಕವನ ಪಂಕ್ತಿಗಳು.

* ಅಗಸ್ಟ್ ಹದಿನೈದನೆಯ ತಾರೀಖು ಸಂಜೆ ದೆಹಲಿಯಲ್ಲಿ ಸಮಾರು ಮೂರು ಲಕ್ಷಕ್ಕೆ ಮೀರಿದ ಜನಮಯ ಚಕ್ರವಾಳದಲ್ಲಿ ನಡೆದ ರಾಷ್ಟಧ್ವಜಾರೋಹಣದ ಸಮಯದಲ್ಲಿ ಮಳೆ ಸುರಿದುದೆಂದೂ ತುಸು ಹೊತ್ತಿನಲ್ಲಿಯೆ ಹೊಳವಾಗಿ ಗಗನಾಭ್ರವೇದಿಕೆಯಲ್ಲಿ ಕೇತನ ಪಟದ ತ್ರಿವರ್ಣಗಳಿಗೆ ಭಿತ್ತಿಯಾಗಿ ಸಮರಸವಾಗಿ ಸೊಗಸಾಗಿ ಕಾಮನಬಿಲ್ಲು ಕಟ್ಟಿತೆಂದೂ ರೇಡಿಯೋ ವ್ಯಾಖ್ಯಾನಕಾರನೂ ವರ್ಣಿಸಿದ್ದನ್ನು ಸಹೃದಯರು ಗಮನಿಸಬಹುದು.

## ಏನೆಂದು ಪ್ರಾರ್ಥಿಸಲಿ?*

ಏನೆಂದು ಪ್ರಾರ್ಥಿಸಲಿ? ಏನೆಂದು ಪ್ರಾರ್ಥಿಸಲಿ
ಈ ವೈರ್ಯ ಸಂದಿಗ್ಧ ವಿಷಮ ಸಂಸ್ಥಿತಿಯಲ್ಲಿ?
ಬೆಂಕಿ ಬೇಡೆಮ್ದೆ? ಶತಮಾನಗಳ ದಾಸ್ಯಕಶ್ಮಲ
ಸುಡುವುದೆಂತು? ಕಷ್ಟ ತಪ್ಪಲಿ ಎಂದೆ? ಆತ್ಮ
ಪರಿಪಕ್ವವಹುದೆಂತು ಭಾರತಕೆ ಬರದಿರಲಿ
ರಣರುದ್ರನೆಂದೆ? ಕರಗದೆ, ಬಿರುಕುಗಳ್ ಬರಿದೆ
ಬೆಸೆಯುವುವೆ? ಕಮ್ಮಾರನಿಕ್ಕದೆಯೆ ಛಿದ್ರಗಳ್
ತೊಲಗುವುವೆ? ಏನೆಂದು ಪ್ರಾಥಿಸಲಿ ನಿನ್ನನೋ
ಅದಿಶಕ್ತಿ? ಸಮರಾಗಿ ಸರ್ವಮಂ ಸುಡಲೆಂದೆ?
ಹಿರಿ ಬೆಲೆಯ ಕಲೆಯ ಸೃಷ್ಟಿಗಳೆಲ್ಲ ಸಿಡಿಲಗ್ನಿ
ಮಳೆಯಿಂದೆ ಕರಿಕುವೋಗಲಿ ಎಂದೆ?

ಹೊಸಕವಿಯ
ಹೊಸರಚನೆ ಮೂರ್ಖಸೈನಿಕರಂಧ ರೋಷಕ್ಕೆ,
ಸೇನಾನಿಗಳ ಸುಯೋಧನ ಛಲಕೆ, ಪ್ರತಿಭಟಿಪ
ಮಿತ್ರಪಕ್ಷದ ಆಕ್ರಮಿಪ ಶತ್ರುಪಕ್ಷದ ಉಗ್ರ
'ಅಗ್ನಿನೀತಿ'ಗೆ ನಶಿಸಲೆಂದೆ? ಕವಿ ಸಹಿಸುವನೆ

ಕಲೆಯ ಸೃಷ್ಟಿಯ ನಾಶಮಂ, ಹೇ ಜನಗ್ರಾಮಾತೆ?
ಈ ಜಗದ್ ಯುದ್ಧಕಿಂ ಪಿರಿಯವೈಸಲೆ ಕವಿಯ
ರಚಿಸುತಿಹ ರಾಮಾಯಣಂ ಮೇಣ್ ಕೆಂಪುವೂ ಗಿಡದಿ,
ಪಕ್ಷಿಗಾಂಧಿಯ ತೆರದಿ, " ಶಾಂತಿ ಸುಗ್ಗಿಗೆ ಸುವ್ವಿ,
ಸುವ್ವಿ!" ಎನುವೀ ಟುವ್ವಿ ಹಕ್ಕಿಯಾಲಾಪನಂ? -
ಏನೆಂದು ಪ್ರಾರ್ಥಿಸಲಿ? ಏನೆಂದು ಪರ್ಥಿಸಲಿ
ಈ ವಿಷಮ ಸಂಸ್ಥಿತಿಯಲ್ಲಿ, ಓ ಮಹಾತಾಯಿ?
ಕೊರತೆಗಳೇನೆಇರಲಿ, ಕೈಮುಗಿದುಲಿವೆನಿಂತು:
"ನಿನ್ನಿಚ್ಛೆ ನೆರವೆರಲಿ! ಕವಿಯಾಸೆ ಕೈಸೇರಲಿ!
ಬೇಗ ಲೋಕಕೆ ಶಾಂತಿ ಮೈದೋರಲಿ! ಸರ್ವರಿಗೆ,
ತಾರತಮ್ಯಗಳಳಿದು, ಸ್ವಾತಂತ್ರ್ಯ ಸಮತೆಗಳ್
ಸಿದ್ಧಿಯಾಗಲಿ, ಸಾಧಿಸಲ್ ಪರಮಪುರುಷಾರ್ಥಮಂ!"

ಬೆಂಗಳೂರು, ೧೦-೪-೧೯೪೨

# ಅಪತ್ರಿಕಾ ವಾರ್ತೆ

ರವಿ ಮೂಡಿದನು;
ಕವಿ ನೋಡಿದನು:
ಬಾಹ್ಯೇಘಟನೆಗೆ ಭಾವಸ್ಪಂದಿತೆಯಾದಳು ಸಹೃದಯೆ ಪೃಥಿವಿ!

ರವಿ ಮೂಡುತಿರೆ
ಕವಿ ನೋಡುತಿರೆ
ಕ್ರತುವಿಂದುಣ್ಮಿತು ಗಾಯತ್ರಿ,
ವಾಗ್ರಸರೂಪಿಣಿ ಸಾವಿತ್ರಿ: -
"ಓಂ ಭೂರ್ಭುವಸ್ಸುವಃ
ತತ್ಸವಿತುರ್ವರೇಣಿಯಂ
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್!"
ಆಲಿಸಿ ರಸವಿದ್ಯುನ್ಮಯಿಯಾದಳ್ ಸಹೃದಯೆ ಪೃಥಿವಿ!

ರವಿ ಮೂಡಿದನು,
ಕವಿ ನೋಡಿದನು:
ಬಾನುಲಿಯೊರೆಯದ ಪತ್ರಿಕೆ ಬರೆಯದ
ರಾಷ್ಟ್ರಾಧ್ಯಕ್ಷರು ಗೋಷ್ಠಿಗೆ ಕರೆಯದ
ಆ ವನವಾಸೀ ವಾರ್ತೆ
ತಾನಾದುದು ದಿಕ್ಕರಿ ಕರ್ಣ ಸುವಾರ್ತೆ!
ನಂದನಸುಮ ಜಯಮಾಲೆಯನೆತ್ತಿತು ಐರಾವತ ಹಸ್ತಂ:
ರಸರೋಮಾಂಚನ ತಟಿದಾಲಿಂಗನಕಾನಂದಿತೀ ವಿಶ್ವಸಮಸ್ತಂ!
ಅಂಬರ ಔಕಸ ಹಸ್ತನ್ಯಸ್ತಂ
ಕುಂಭ ಹಿರಣ್ಮಯಮಾ ಸೋಮಂ
ಕುಂಭಿನಿಗವತರಿಸಿತು ಸ್ವರ್ಧಾಮಂ।
ಆ ಋಷ್ಯನುಭವದಗ್ನಿಯ ಸೇತುವೆಯಿಂ
ಪರಿದಿಳಿತಂದುದು ಅಮೃತಂ ದೈವೀಚರಣಸಮೂಹಂ,
ಮೃಣ್ಮಯ ಪರಿವರ್ತನಕಾರಣ ಯೋಗಕ್ಷೇಮಂ,
ಅತಿಮಾನಸ ಋತಚಿನ್ಮಯ ದಿವ್ಯಪ್ರೇಮಂ!

೨೧-೧-೧೯೫೧

## ಮನೆ ಮನೆಯ ತಪಸ್ವಿನಿಗೆ

ಮನೆಮನೆಯಲಿ ನೀನಾಗಿಹೆ ಗೃಹಶ್ರೀ;
ಹೆಸರಿಲ್ಲದ ಹೆಸರು ನಿನಗೆ 'ಗೃಹಸ್ತ್ರೀ'!
ಹೇ ದಿವ್ಯ ಸಾಮಾನ್ಯೆ,
ಹೇ ಭವ್ಯೆ ದೇವಮಾನ್ಯೆ,
ಚಿರಂತನ ಅಕೀರ್ತಿಕನ್ಯೆ,
ಅನ್ನಪೂರ್ಣೆ, ಅಹಂಶೂನ್ಯೆ,
ನಮೋ ನಿನಗೆ ನಿತ್ಯಧನ್ಯೆ!

ರಾಷ್ಟ್ರಸಭಾ ಅಧ್ಯಕ್ಷಿಣಿ
ಶ್ರೀಮತಿ ಆ ಸರೋಜಿನಿ,
ಝಾನ್ಸಿರಾಣಿ ಲಕ್ಷ್ಮಿಬಾಯಿ

ಅವರಿಗೆಲ್ಲ ಮಹಾತಾಯಿ
ನೀನೆ ಬಸಿರು, ನೀನೆ ಉಸಿರು,
ನೀನಿದ್ದರೆ ಅವರ ಹೆಸರು!
ಭದ್ರತಾ ಸಮಿತಿಯಲ್ಲಿ
ವಿಜಯಲಕ್ಷ್ಮಿವಾಗ್ಮಿತೆ
ಆಧ್ಯಾತ್ಮಿಕ ಸಂಪತ್ತಿನ
ನಿನ್ನ ಧೂಮದಿದಿರಿನಲ್ಲಿ
ರಾಜಕೀಯದಲ್ಪತೆ!

ಅಡುಗೆ ಮನೆಯೆ ಪರ್ಣಶಾಲೆ;
ಒಲೆಯ ಅಗ್ನಿ ಮಖಜ್ವಾಲೆ!
ಬಿಡುವಿಲ್ಲದ ಕಟು ತಪಸ್ಯೆ:
ಹುಣ್ಣಿಮೆಯೂ ಅಮಾವಾಸ್ಯೆ!
ಆದರೂ ಅದೀನಾಸ್ಯೆ
ನೀನೆ ನಮಗೆ ಧೈರ್ಯ, ಆಶೆ!
ನಿನ್ನ ಪಾದಕಿದೋ ಪೂಜೆ:
ಪೂತ ಕವನ ಧವಳ ಲಾಜೆ!
ಬೆಂಕಿ, ಹೊಗೆ; ಹೊಗೆ, ಬೆಂಕಿ!
ಮಸಿ, ಮುಸುರೆ; ಮುಸುರೆ, ಮಸಿ!
ಅದರೇನು? ನಿಶ್ಯಂಕಿ
ಚೌಧುರಾಣಿ ಮಹೀಯಸಿ!
ನೀನೆ ಗರತಿ, ನೀನೆಯೆ ರತಿ,
ಎದೆ ಎದೆಗೂ ಹೂವಾರತಿ:
ನೀನಿರದಿರೆ ಲೋಕದ ಗತಿ
ದುರ್ಗತಿ, ಮೃತಿ, ದೇವರೆ ಗತಿ!
ರಕ್ಷಿಸು, ಓ ದೈನಂದಿನ
ಸಂಸಾರದ ರಸರೂಪದ
ಚಿರ ತಾಪಸಿ, ಸುರ ರೂಪಸಿ,
ಯತಿಸತಿ ಶಿವೆ, ಓ ಪಾರ್ವತಿ!

ಹಿಡಿಯದಿರಲಿ ನಿನಗಾದರು
ಗಂಡಸರಾ ಕುತ್ತ:
ಪ್ರಖ್ಯಾತಿಯ ಪಡೆಯುವೊಂದು

ಪ್ರಾಪಂಚಿಕ ಪಿತ್ತ!
ಹೊಸಲಾಚೆಗೆ ನೀನೋತರೆ
ಹೊಸಲೀಚೆಗೆ ಬೆಳಕಿಲ್ಲ:
ಹೆಸರಾಸೆಗೆ ನೀ ಸೋತರೆ
ಉಸಿರಸೆಯೆ ನಮಗಿಲ್ಲ!

ನಿನ್ನಿಂದಲೆ ಹಿಮ್ಮೆಟ್ಟಿದೆ
ಜನ ಜನದಾ ಕುಸಂಸ್ಕೃತಿ;
ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ.
ರಾಮಾಯಣ ಮಹಾಭಾರತ
ಶಾಕುಂತಲ ಕಾದಂಬರಿ
ಬಹುಕವಿಗಳ ರಸಸೃಷ್ಟಿಯ
ಬಹುಕಲೆಗಳ ರಸದೃಷ್ಟಿಯ
ತುಷ್ಟಿಗೆ ಮೇಣ್ ಪುಷ್ಟಿಗೆ ನೀನ್
ದೇವತೆಯಾಗಿರುವೆ;
ಆ ಸೀತೆಯೊ ಮಾಶ್ವೇತೆಯೊ
ಸಾವಿತ್ರಿಯೊ ದಮಯಂತಿಯೊ
ಆರಾದರು ಸರಿಯೆ
ಹೆಗಲೆಣೆ ನಿನಗಾ ಪೆರ್ಮೆಗೆ
ಪಿರಿದನು ನಾನರಿಯೆ!

ತಾಳುತ್ತಿದೆ ಬಾಳುತ್ತಿದೆ
ನಿನ್ನಿಂದೆಮ್ಮ ಇಳೆ.
ಹೇ ದಿವ್ಯೆ, ಸಾಮಾನ್ಯೆ,
ಮನೆಮನೆಯಾ ಊರ್ಮಿಳೆ,
ಗೃಹಿಣಿ, ಗರತಿ, ದೇವಿ, ತಾಯಿ,
ಹೆಸರಿಲ್ಲದ ಮಹಿಳೆ,
ಮಣಿವನು ಇದೊ ನಿನ್ನಡಿಗೀ
ಹುಸಿವೆಸರಿಗೆ ಮರುಳಾಗದ
ಹೆಸರೊಲ್ಲದ ಹಸುಳೆ!

ಸೌಖ್ಯದ ನೆಲೆ, ಶಾಂತಿಯ ಮನೆ,
ಸೌಂದರ್ಯದ ಶಿವಮಂದಿರೆ,
ಸಾಮಾನ್ಯದ ಸಿರಿತವರೆ,
ಹಿಡಿಯದಿರಲಿ ನಿನಗವರಾ
ಹೊಗಳಿಕೆಯಾ ಕೀರ್ತಿಯ ಶನಿ,
ಗೃಹ ಗೃಹ ಗೃಹ ತಪಸ್ವಿನೀ!
ಪತ್ರಿಕೆಗಳ ದಪ್ಪಕ್ಷರ
ಮೇಣ್ ಚಿತ್ರದ ಕ್ಷಣಿಕಕೆ ನೀ
ಬೆಪ್ಪಾಗದೆ, ಹೇ ಜನನೀ,
ಒಪ್ಪಾಗಿರು, ಒಲವಾಗಿರು;
ನಿಜಮತದಲಿ ಋಜುಪಥದಲಿ
ನಡಸೆಮ್ಮನು, ಋತದರ್ಶಿನಿ
ಹೇ ಮನುಕುಲ ಕಲ್ಯಾಣೀ

೧೭-೩-೧೯೫೦

## ‘ಶ್ರೀ ಸಾಮಾನ್ಯ’ರ ದೀಕ್ಷಾಗೀತೆ*

‘ಶ್ರೀಸಾಮಾನ್ಯ’ವೆ ಭಗವನ್ ಮಾನ್ಯಂ;
‘ಶ್ರೀಸಾಮಾನ್ಯ’ ನೆ ಭಗವದ್ ಧನ್ಯಂ!
ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ!
ಸಾಮಾನ್ಯರೋ ನಾವು:
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀವೂ!
ಸರ್ವರಿಗಾಗಿಯೆ ಸರ್ವವ ತನ್ನಿಮ್;
“ಸರ್ವರಿನೆನಗೆ! ಸರ್ವರಿಗೆನ್ನಿಂ!
ಸರ್ವರಿಗಾಗಿಯೆ ಸರ್ವಂ!” ಎನ್ನಿಂ.
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಿಂ!

೧

ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
“ಸರ್ವೋದಯ!” “ಸರ್ವೋದಯ!”
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!
ಮೇಲಿಲ್ಲವೊ ಕೀಳಿಲ್ಲವೊ
ಸರ್ವ ಸಮಾನದ ರಾಜ್ಯ:
ಅಧ್ಯಕ್ಷನೊ ಸೇನಾನಿಯೊ
ಕಮ್ಮಾರನೊ ಚಮ್ಮಾರನೊ
ಕಾಯಕವೆಲ್ಲವು ಪೂಜ್ಯ!
ಕೈಗಾರನೊ ಕಲೆಗಾರನೊ
ಇರ್ವರಿಗೂ ಸಮಭೋಜ್ಯ;
ಇನ್ನಿಲ್ಲವೊ ಅಹಮಹಮಿಕೆ,
ತರತಮಗಳ ವ್ಯಾಜ್ಯ!
ಉಣಿಸಿಗೆ ಮೇಣ್ ಉಡುಪಿಗೆ ಮೇಣ್
ಆರಾಗಲಿ ಆರಡಿಯನ್
ಹಿಡಿಯುವುದಿನ್ ತ್ಯಾಜ್ಯ!
ಲೌಕಿಕದೊಳ್ ಲೌಕಿಕರಿಗೆ
ಆರಾಗಲಿ ಆರಡಿಯೊಳ್
ಹೊರಳುವುದಿನ್ ‘ಪೂಜ್ಯ’!
- ಇದು ಲೌಕಿಕ ರಾಜ್ಯ!

೨

ಸಾಮಾನ್ಯರೊ ನಾವು:
ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ
ನೀವೂ! ನೀವೂ! ನೀವೂ! -
ನಿಲ್ ಇನ್, ದಿಟ್ಟಗೆ ನಿಲ್ ಇನ್!
ಬಾಗಿದ ಸೊಂಟವ ನೆಟ್ಟಗಿಡು;
ಬೆದರಿದ ಬೆನ್ನಂ ನೇರ್ ಮಾಡು.

ನೆಲ ನೋಡುವ ಕಣ್ಣಂ ಮೇಲೆತ್ತಿ
ಅಭ್ಯಾಸಂ ಮರೆತಾ ತಲೆಯೆತ್ತಿ
ಎದುರಾಳಿಯ ಮೊಗ ನೋಡು!
ಶತಶತಮಾನಂ ಗಗನವ ಹೀರದೆ,
ದಾಸ್ಯದ ತಿಮಿರದಿ ದಾರಿಯೆ ತೋರದೆ,
ದಾರಿದ್ರ್ಯದ ಶವಭಾರದಿ ಬಗ್ಗಿ,
ದರ್ಪದ ಪದಘಾತಕೆ ದೈನ್ಯದಿ ಕುಗ್ಗಿ
ಕುನಿದಿಹ ವಕ್ಷವನುಬ್ಬಿಸಿ ಉಸಿರಾಡು!

ತೊಲಗಿತು ನಿನ್ನೆಯ ನಾಯ್ ಪಾಡು;
ಇನ್ನಿದು ದಿಟಕೂ ನಿನ್ನಯ ತಾಯ್ ನಾಡು:
ನಿನ್ನದೆ ನೆಲ ! ನಿನ್ನದೆ ಹೊಲ!
ನಿನ್ನದೆ ಕಾನ್! ನಿನ್ನದೆ ಬಾನ್
ನಿನ್ನದೆ ನುಡಿ! ನಿನ್ನದೆ ಗುಡಿ!
ನಿನ್ನದೆ ಹೊಳೆ! ನಿನ್ನದೆ ಬೆಳೆ!
ನಿನಗಾಗಿಯೆ ನಿನ್ನೊಲವಿಗೆ
ಇನ್ ಮಿಸಲ್ ನೀ ಬೇಳೆವ ಬೆಳೆ!
ನಿನಗಾಗಿಯೆ ನಿನ್ನೊಲವಿಗೆ
ಇನ್ ಮಿಸಲ್ ನೀ ಉಳುವ ಇಳೆ!

೪

'ಶ್ರೀಸಾಮಾನ್ಯರೊ' ನಾವು:
ಶ್ರೀಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ ನೀವೂ!
ಹೆಸರಾಸೆಗೆ ಕೆಸರಾಸೆಗೆ
ಉಸಿರನು ನೋಯಿಸೆವಾವು;
ಹಿಡಿಯದು ನಮ್ಮನು ಕೀರ್ತಿಯ ಹವ್ಯಾಸದ ಹೆಬ್ಬಾವು!
ಭಗವಂತನೆ ಸರ್ವೋತ್ತಮ ಸಾಮಾನ್ಯನ್:
ಸಾಮಾನ್ಯನೆ ಸರ್ವೋತ್ತಮ ಶ್ರೀಮಂತನ್!
ಆತನೆ ಓರ್ವನ್, ಆತನೆ ಸರ್ವನ್,
ಸರ್ವಾತ್ಮನ್ ತಾನ್ ಸರ್ವಾನನ್ಯನ್!
ನಮಗಿಲ್ಲಯ್ ಶಾಶ್ವತ ನಾಮದ ಗರ್ವಂ,
ನಶ್ವರವನೆ ಶಾಶ್ವತವಾಗಿಸುವಾ

ಅಹಂಕಾರದಾ ಮಿಥ್ಯಾಗರ್ವಂ.
ನಶ್ವರ ಸುಖಿಗಳ್ ನಾವು:
ಕೇಡಲ್ಲವೊ ನಮಗಾ ಹೆಸರಿಲ್ಲದ ಸಾವು!
ಹಿಂಜರಿಯೆವು, ಅಂಜೆವು, ಸಾಮಾನ್ಯತೆಗಾವು!
ನೇಗಿಲ್ ಲೇಖನಿ ತಕ್ಕಡಿ ಕತ್ತಿ
ನಮಗೆಲ್ಲಂ ಸಮರಸ ಸಂಪತ್ತಿ.
ನಮಗಲ್ಲವೊ ಪತ್ರಿಕೆಗಳ್
ಪೊತ್ತಿಸುವಾ ಪ್ರಖ್ಯಾತಿಯ
ಪುಲ್ವೆಂಕೆಯ ಕಾಂತಿ,
ಹೆಸರಿನ ವಿಭ್ರಾಂತಿ!
ಹೆಸರರಿಯದ ದಿನದಿನದಾ
ಒಲುಮೆಯ ಬಾಳಿನ, ನಲುಮೆಯ ಸೇವೆಯ
ಅಖ್ಯಾತಿಯೆ ನಮ್ಮಾತ್ಮದ ಚಿರಶಾಂತಿ!
ಶಾಂತಿಗೆ ದುರ್ಗಂ, ಶಾಂತಿಸ್ವರ್ಗಂ,
ಅಖ್ಯಾತಿಯೆ ಸಾಮಾನ್ಯರ ಶ್ರೀಮನ್ ಮಾರ್ಗಂ:

೫

ಬರಿ ಲೌಕಿಕವಲ್ಲಯ್ ನಮ್ಮೆದೆಯುಸುರಿನ ಗಮನಂ:
ಹುಸಿಯಲ್ಲದ ಋಷಿತನಕಿದೊ ನಮ್ಮಯ ನಮನಂ;
ರಸ ತುಂಬಿದ ಕವಿಕಲೆಗಿದೊ ನಮ್ಮಯ ನಮನಂ!
ಭಗವತ್ ತ್ಯಾಗಿಗೆ ಇದೊ ನಮನಂ!
ಶ್ರೀಮದ್ ಯೋಗಿಗೆ ಇದೊ ನಮನಂ! -
ಮೇಣ್....
ಮರೆ ಮೋಸದ ಬೂಟಾಟಿಕೆಗಿದೊ ಮರ್ದನ ದಮನಂ!
ಧರ್ಮದ ಸೋಗಿನ ದುರ್ಲಾಭಕೆ ಕೋ ಧಿಕ್ಕಾರದ ಶಮನಂ;
ಮೇಣ್ ಬಲಭೇಷಜ ವಮನಂ! -
ಹನಿ ಹನಿ ಸೇರುತ ಹರಿಯುವ ಜನ ಜನತಾ ಭಕ್ತಿ
ತಾನದೆ ತಿಳಿಯಯ್ ಸಾಮಾನ್ಯರ ಶ್ರೀಶಕ್ತಿ.
ಸರ್ವೋದಯವೆಮ್ಮಯ ಗುರುದೀಕ್ಷಾಮಂತ್ರಂ;
ಸರ್ವಪ್ರೇಮಜ ಸಮತಾಭಾವಂ ಶಿಕ್ಷಾತಂತ್ರಂ;
ಸರ್ವಸಮರ್ಪಣ ಯೋಗದ ಮರ್ಮಂ
ಬೋಧಿಪ ನಿತ್ಯ ನಿರಂತರ ಕರ್ಮಂ

ಸಾಧಿಪ ಲೀಲಾನಂದದ ಧರ್ಮಂ ರಕ್ಷಾಯಂತ್ರಂ!

‘ಶ್ರೀಸಾಮಾನ್ಯರೊ’ ನಾವು:

ಓ ಬನ್ನಿಂ,

ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿಂ

ನೀವೂ! ನೀವೂ! ನಿವೂ!